# ಕರುನಾಡ ಸುದ್ದಿ

ಸಂಪಾದಕರು: ವೈ.ಕೆ.ಪ್ರವೀಣ್ ಕುಮಾರ್

Editor: Y.K. PRAVEEN KUMAR

**KARUNADA SUDDI**

ಕನ್ನಡ ದಿನಪತ್ರಿಕೆ kannada Daily

Volume-04 Issue: 295 R.N.I No: KARKAN/2021/81166 KA/SK/CTA-858/2025-2027 Date: 16-08-2025 Saturday Page:04 Price:Rs.3-00 9902969820 Email: karunadasuddi2020@gmail.com


# ವಾರ್ತಾ ಇಲಾಖೆಗೆ ಪತ್ರಕರ್ತರ ವಾಹನ ಹಸ್ತಾಂತರ

## ಸಚಿವ ಡಿ.ಸುಧಾಕರ್ ಅವರಿಂದ ಹಸಿರು ನಿಶಾನೆ

**ಚಿತ್ರದುರ್ಗ:** ಚಿತ್ರದುರ್ಗ ನಗರದ ಮುರುಘ ರಾಜೇಂದ್ರ ಕ್ರೀಡಾಂಗಣದಲ್ಲಿ ಶುಕ್ರವಾರ ಪತ್ರಕರ್ತರ ಹೊಸ ವಾಹನವನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ಯೋಜನಾ ಮತ್ತು ಸಾಂಖ್ಯಿಕ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಡಿ.ಸುಧಾಕರ್ ಹಸಿರು ನಿಶಾನೆ ಮೂಲಕ ಚಾಲನೆ ನೀಡಿದರು.



**ಜಿಲ್ಲಾ ಉಸ್ತುವಾರಿ ಸಚಿವರಾದ ಡಿ.ಸುಧಾಕರ್ ಅವರು ಶಾಸಕರ ವಿಶೇಷ ಪ್ರದೇಶಾಭಿವೃದ್ಧಿ ನಿಧಿ ಯೋಜನೆಯಡಿ ಅಂದಾಜು ರೂ.27 ಲಕ್ಷ ವೆಚ್ಚದಲ್ಲಿ ಒಂದು ಸ್ವರಾಜ್ ಮಜ್ದಾ ವಾಹನವನ್ನು ಪತ್ರಕರ್ತರಿಗಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ಹಸ್ತಾಂತರ ಮಾಡಿದರು.**

ಈ ವೇಳೆ ಸ್ವತಃ ಸಚಿವ ಡಿ.ಸುಧಾಕರ್ ಅವರೇ ಪತ್ರಕರ್ತರ ನೂತನ ವಾಹನವನ್ನು ನಗರದ ಮುರುಘಾ ರಾಜೇಂದ್ರ ಕ್ರೀಡಾಂಗಣದಿಂದ ಜಿಲ್ಲಾ ಪಂಚಾಯತ್ ಕಚೇರಿವರೆಗೂ ವಾಹನ ಚಲಾಯಿಸಿದ್ದು ವಿಶೇಷವಾಗಿತ್ತು. ಎಲ್ಲ ಪತ್ರಕರ್ತರು, ಗಣ್ಯಮಾನ್ಯರು ಇದೇ ವಾಹನದಲ್ಲಿ ಜಿಲ್ಲಾ ಪಂಚಾಯತ್ ವರೆಗೂ ಪ್ರಯಾಣಿಸಿದರು.

ಯೋಜನೆ ಮತ್ತು ಸಾಂಖ್ಯಿಕ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಡಿ.ಸುಧಾಕರ್ ಅವರು ಶಾಸಕರ ವಿಶೇಷ ಪ್ರದೇಶಾಭಿವೃದ್ಧಿ ನಿಧಿ ಯೋಜನೆಯಡಿ ಅಂದಾಜು ರೂ.27 ಲಕ್ಷ ವೆಚ್ಚದಲ್ಲಿ ಒಂದು ಸ್ವರಾಜ್ ಮಜ್ದಾ ವಾಹನವನ್ನು ಪತ್ರಕರ್ತರಿಗಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ಹಸ್ತಾಂತರ ಮಾಡಿದರು.

ಈ ಸಂದರ್ಭದಲ್ಲಿ ಚಿತ್ರದುರ್ಗ ಶಾಸಕ ಕೆ.ಸಿ.ವೀರೇಂದ್ರ ಪಪ್ಪಿ, ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮದ ಅಧ್ಯಕ್ಷ ಜಿ.ಎಸ್.ಮಂಜುನಾಥ್, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಂ.ಕೆ. ತಾಜ್‌ಪೀರ್, ನಗರಸಭೆ ಅಧ್ಯಕ್ಷೆ ಸುಮಿತಾ ಬಿ.ಎನ್.ರಾಘವೇಂದ್ರ, ಜಿಲ್ಲಾ ಗ್ಯಾರಂಟಿ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಆರ್.ಶಿವಣ್ಣ, ಉಪಾಧ್ಯಕ್ಷ ಡಿ.ಎನ್.ಮೈಲಾರಪ್ಪ, ಜಿಲ್ಲಾಧಿಕಾರಿ ಟಿ.ವೆಂಕಟೇಶ್, ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ, ಜಿಲ್ಲಾ ವಾರ್ತಾಧಿಕಾರಿ ಬಿ.ವಿ.ತುಕಾರಾಂರಾವ್, ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ದಿನೇಶ್ ಗೌಡಗೆರೆ, ಕಾರ್ಯದರ್ಶಿ ವೀರೇಶ್.ವಿ,ವಿನಾಯಕ,ಉಪಾಧ್ಯಕ್ಷ ಮಾರುತಿ ಖಜಾಂಚಿ ಕುಮಾರಸ್ವಾಮಿ, ಕಾರ್ಯಕಾರಿ ಸಮಿತಿ ಸದಸ್ಯ ನಾಗೇಶ್, ಶಿವರಾಜ್ ರಾಜಶೇಖರ, ದ್ವಾರಕನಾಥ ಸೇರಿದಂತೆ ಹಲವು ಪತ್ರಕರ್ತರು, ಗಣ್ಯರು ಇದ್ದರು.

## ಜಯವಿಭವ ಮುರುಘರಾಜೇಂದ್ರ ಸ್ವಾಮೀಜಿ ಸ್ಮರಣೆ:

# ಸಮಾಜಕ್ಕೆ ಚಂದ್ರನ ಪ್ರೀತಿ ನೀಡಿದ ಜಯವಿಭರು

**ಚಿತ್ರದುರ್ಗ:** 'ಜಯದೇವ ಗುರುಗಳು ಸೂರ್ಯನಂತೆ ಪ್ರಕಾಶಿಸಿದರೆ, ಜಯವಿಭರು ಚಂದ್ರನಂತೆ ಇಡೀ ಸಮಾಜವನ್ನು ಅತ್ಯಂತ ಪ್ರೀತಿಯಿಂದ ಕಂಡರು. ಜೊತೆಗೆ ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ, ಕೃಷಿಗೆ ಹೆಚ್ಚಿನ ಒಲವು



ತೋರಿದ್ದರು' ಎಂದು ಎಸ್‌ಜೆಎಂ ವಿದ್ಯಾಪೀಠದ ಆಡಳಿತ ಮಂಡಳಿ ಸದಸ್ಯ ಬಸವ ಕುಮಾರ ಸ್ವಾಮೀಜಿ ತಿಳಿಸಿದರು.

ನಗರದ ಮುರುಘಾ ಮಠದಲ್ಲಿ ಆಯೋಜಿಸಿದ್ದ ಜಯವಿಭವ ಮುರುಘರಾ ಜೇಂದ್ರ ಸ್ವಾಮೀಜಿ ಸ್ಮರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಯುದ್ಧಕಾಲದಲ್ಲಿ ಶ್ರೀಮಠ ದಿಂದ ದೇಶಕ್ಕಾಗಿ ಧನಸಹಾಯ ಮಾಡಿದರು. ಅನೇಕ ಸಮಾಜೋಧಾರ್ಮಿಕ ಕಾರ್ಯಗಳನ್ನು ಮಾಡಿದ ಶ್ರೀಗಳು, 1964ರಲ್ಲಿ ಬಯಲಾ ಗುತ್ತಾರೆ. ಅವರ ಲಿಂಗೈಕ್ಯ ಸಮಾಧಿ ಬೃಹನ್ಮಠದ ಆವರಣದಲ್ಲಿದೆ' ಎಂದು ಹೇಳಿದರು. ಚಿತ್ರದುರ್ಗ ಬೃಹನ್ಮಠಕ್ಕೆ ಪೀಠಾಧ್ಯಕ್ಷರ ನೇಮಕ ಮಾಡುವಾಗ ಮೂವರ ಹೆಸರಿರುತ್ತದೆ. ಅದರಲ್ಲಿ ಜಯವಿಭವರನ್ನು ಅಂತಿಮಗೊಳಿಸಿ ತೀರ್ಮಾನವಾಗುತ್ತದೆ. ಆಗಿನ ಕಾಲಕ್ಕೆ 50 ಲಕ್ಷವನ್ನು ಶಿಕ್ಷಣಕ್ಕೆ ವ್ಯಯ ಮಾಡಿದ ಕೀರ್ತಿ ಜಯದೇವರಿಗೆ ಸಲ್ಲುತ್ತದೆ. ಅಂತಹುದೇ ಸಾಮಾಜಿಕ ಹೊಣೆಗಾರಿಕೆಯನ್ನು ಜಯವಿಭವ ಸ್ವಾಮೀಜಿ ವಹಿಸಿಕೊಂಡು ಮುನ್ನಡೆದರು' ಎಂದರು. 'ಜಯವಿಭವ ಶ್ರೀಗಳು ಎಂದರೆ ಗಂಭೀರತೆ, ಸದಾಚಾರದಂಥ ಮಹಾಮೇರು ವ್ಯಕ್ತಿತ್ವದವರಾಗಿದ್ದು, ತುಂಬಿದ ಕೊಡದಂತಹ ಸ್ವಭಾವ. ಕಾಶಿಯಲ್ಲಿ ಅಧ್ಯಯನ ಮಾಡಿ ಬಂದ ಅವರಿಗೆ ಬೃಹನ್ಮಠದ ಪೀಠಾಧ್ಯಕ್ಷರಾಗಿ ಜಯದೇವರ ಪಥದಲ್ಲಿ ಹೆಜ್ಜೆ ಇಡುತ್ತ ಮಠದ ಖಾಲಿ ಜಮೀನುಗಳನ್ನು ಹಸನುಗೊಳಿಸಿ ಅಲ್ಲಿ ಕೃಷಿ, ತೋಟಗಾರಿಕೆ ಹಾಗೂ ಹೈನು ಇತ್ಯಾದಿ ಚಟುವಟಿಕೆಗಳಿಗೆ ಆದ್ಯತೆ ನೀಡಿ ದಾಸೋಹಕ್ಕೆ ಒತ್ತು ನೀಡಿದ್ದರು' ಎಂದು ಮುರುಘಾಮಠದ ಸಾಧಕ ಗುರು ಬಸವಮುರುಘೇಂದ್ರ ಸ್ವಾಮೀಜಿ ಸ್ಮರಿಸಿದರು.



**ಬೆಂಗಳೂರು:** ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಯನ್ನಾಗಿ ಹಿರಿಯ ಪತ್ರಕರ್ತರಾದ ಎಚ್.ಬಿ.ಮದನಗೌಡ ಅವರನ್ನು ಕಸಾಪ ಅಧ್ಯಕ್ಷ ಡಾ.ಮಹೇಶ್ ಜೋಶಿ ಅವರು ನೇಮಕ ಮಾಡಿದ್ದು, ಈ ಆದೇಶ ಪತ್ರವನ್ನು ಗುರುವಾರ ಕಸಾಪ ಪ್ರಧಾನ ಕಚೇರಿಯಲ್ಲಿ ಹಸ್ತಾಂತರಿಸಲಾಯಿತು. ಈ ಸಂದರ್ಭದಲ್ಲಿ ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಗೌರವ ಕಾರ್ಯದರ್ಶಿ ಪಟೇಲ್ ಪಾಂಡು, ಕಸಾಪ ಅಂತಾರಾಷ್ಟ್ರೀಯ ಸಂಯೋಜಕಿ ನಿವೇದಿತಾ ಹಾವನೂರು, ಹಾಸನ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಎಚ್.ಎಲ್.ಮಲ್ಲೇಶಗೌಡ, ಹಾಸನ ಜಿಲ್ಲಾ ಕಾರ್ಯ ನಿರತ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ಜೆ.ಆರ್.ಕೆಂಚೇಗೌಡ ಇದ್ದರು.

## ಸಮಾರಂಭದಲ್ಲಿ ಸಾಹಿತಿ ಅಲ್ಲಮಪ್ರಭು ಬೆಟ್ಟದೂರು ಅಭಿಮತ

# 'ಪುಸ್ತಕ ಐಷಾರಾಮಿ ವಸ್ತುವಾಗಬಾರದು'

**ಬೆಂಗಳೂರು:** 'ಪುಸ್ತಕಗಳು ಐಷಾರಾಮಿ ವಸ್ತುಗಳಾಗಬಾರದು. ಜನಸಾಮಾನ್ಯರಿಗೆ ಕೈಗೆಟುಕುವ ಬೆಲೆಗೆ ಪುಸ್ತಕಗಳನ್ನು ತಲುಪಿಸುವ ಜವಾಬ್ದಾರಿಯನ್ನು ಸರ್ಕಾರಿ ಪುಸ್ತಕ ಪ್ರಕಟಣೆ ಸಂಸ್ಥೆಗಳು ತೆಗೆದು ಕೊಳ್ಳಬೇಕು' ಎಂದು ಸಾಹಿತಿ ಅಲ್ಲಮ ಪ್ರಭು ಬೆಟ್ಟದೂರು ಅಭಿಪ್ರಾಯಪಟ್ಟರು.

**ಸಿದ್ಧಲಿಂಗಯ್ಯ ಅವರ ಸಮಗ್ರ ಸಾಹಿತ್ಯ ಸಂಪುಟ ಬಿಡುಗಡೆ ಸಮಾರಂಭ**

### ಓದುವವರ ಸಂಖ್ಯೆ ಹೆಚ್ಚಲಿ

**ಕನ್ನಡದಲ್ಲಿ ಸಾಹಿತ್ಯದ ಮುಖ್ಯವಾದ ಧಾರೆ ವಿಚಾರ ಸಾಹಿತ್ಯ. ಈ ಪ್ರಕಾರದ ಸಾಹಿತ್ಯ ಪುಸ್ತಕಗಳೇ ಹೆಚ್ಚು ಮಾರಾಟವಾಗುತ್ತವೆ ಎನ್ನುವುದು ಸಮೀಕ್ಷೆಯೊಂದರಿಂದ ದೃಢಪಟ್ಟಿದೆ. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಕಾವ್ಯ ಓದುವವರ ಸಂಖ್ಯೆ ಕಡಿಮೆಯಿದ್ದು, ಬರೆಯುವವರು ಜಾಸ್ತಿಯಾಗಿದ್ದಾರೆ. ಕನ್ನಡ ಸಾಹಿತ್ಯಕ್ಕೆ ಕೆಲವು ಪ್ರಾತಿನಿಧಿಕ ಕೃತಿಗಳ ಅಗತ್ಯವಿದ್ದು, ನವೋದಯ, ನವ್ಯ ಮತ್ತು ದಲಿತ ಬಂಡಾಯ ಕಾವ್ಯ ಹಾಗೂ ಕಥೆಗಳ ಸಂಚಿಕೆಗಳನ್ನು ಹೊರತರಬೇಕು' ಎಂದು ಹೇಳಿದರು.**

ಕನ್ನಡ ಪುಸ್ತಕ ಪ್ರಾಧಿಕಾರ ನಗರದಲ್ಲಿ ಹಮ್ಮಿಕೊಂಡಿದ್ದ ಸಿ.ಕೆ. ವೆಂಕಟರಾಮಯ್ಯ, ಗೌರೀಶ ಕಾಯ್ಕಿಣಿ, ಅ.ನ. ಕೃಷ್ಣರಾಯ, ಕೋ.ಚೆನ್ನಬಸಪ್ಪ ಹಾಗೂ ಸಿದ್ಧಲಿಂಗಯ್ಯ ಅವರ ಸಮಗ್ರ ಸಾಹಿತ್ಯ ಸಂಪುಟ ಬಿಡುಗಡೆ ಸಮಾರಂಭದಲ್ಲಿ ಭಾಗವಹಿಸಿ, ಮಾತನಾಡಿದರು.

'ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಕಾಡೆಮಿ ಮತ್ತು ಪ್ರಾಧಿಕಾರ ಗಳು ಪ್ರಕಟಿಸುವ ಪುಸ್ತಕಗಳು ಜನಮಾನಸವನ್ನು ಮುಟ್ಟಬೇಕು. ಸರ್ಕಾರಿ ಸಂಸ್ಥೆಗಳು ಪ್ರಕಟಿಸಿದ ಪುಸ್ತಕಗಳ ಖರೀದಿಗೆ ಸಾಹಿತ್ಯಾಸಕ್ತರು ಬೆಂಗಳೂರಿಗೆ ಬರುವುದು ತಪ್ಪಬೇಕು. ಆದ್ದರಿಂದ ಎಲ್ಲೆಡೆ ಪುಸ್ತಕಗಳು ಸಿಗುವ ವ್ಯವಸ್ಥೆಯನ್ನು ರೂಪಿಸಬೇಕು. ನಾವು ವಿದ್ಯಾರ್ಥಿಯಾಗಿದ್ದಾಗ ಸಿದ್ಧಲಿಂಗಯ್ಯ ಅವರ ಪುಸ್ತಕಗಳನ್ನು ?2ಕ್ಕೆ ಖರೀದಿ ಮಾಡುತ್ತಿದ್ದೇವು. ಇತ್ತೀಚೆಗೆ ಪುಸ್ತಕಗಳು ಐಷಾರಾಮಿ ವಸ್ತುಗಳಾಗಿ ಮಾರ್ಪಡುತ್ತಿವೆ. ಜನಸಾಮಾನ್ಯರಿಗೆ ಸಾಹಿತ್ಯ ತಲುಪಬೇಕಾದರೆ ಕನಿಷ್ಠ ಬೆಲೆ ನಿಗದಿಪಡಿಸಿ, ಮಾರಾಟ ಮಾಡಬೇಕು' ಎಂದು ಆಗ್ರಹಿಸಿದರು.

'ಕನ್ನಡದಲ್ಲಿ ಸಾಹಿತ್ಯದ ಮುಖ್ಯವಾದ ಧಾರೆ ವಿಚಾರ ಸಾಹಿತ್ಯ. ಈ ಪ್ರಕಾರದ ಸಾಹಿತ್ಯ ಪುಸ್ತಕಗಳೇ ಹೆಚ್ಚು ಮಾರಾಟವಾಗುತ್ತವೆ ಎನ್ನುವುದು ಸಮೀಕ್ಷೆಯೊಂದರಿಂದ ದೃಢಪಟ್ಟಿದೆ. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಕಾವ್ಯ ಓದುವವರ ಸಂಖ್ಯೆ ಕಡಿಮೆಯಿದ್ದು, ಬರೆಯುವವರು ಜಾಸ್ತಿಯಾಗಿದ್ದಾರೆ. ಕನ್ನಡ ಸಾಹಿತ್ಯಕ್ಕೆ ಕೆಲವು ಪ್ರಾತಿನಿಧಿಕ ಕೃತಿಗಳ ಅಗತ್ಯವಿದ್ದು, ನವೋದಯ, ನವ್ಯ ಮತ್ತು ದಲಿತ ಬಂಡಾಯ ಕಾವ್ಯ ಹಾಗೂ ಕಥೆಗಳ ಸಂಚಿಕೆಗಳನ್ನು ಹೊರತರಬೇಕು' ಎಂದು ಹೇಳಿದರು.

ಬಿಡುಗಡೆಯಾದ ಸಾಹಿತ್ಯ ಸಂಪುಟಗಳ ಬಗ್ಗೆ ಮಾತನಾಡಿದ ಲೇಖಕಿ ಸಾವಿತ್ರಿ ಮುಜುಮದಾರ, 'ಯುವಜನರು ಹಳಗನ್ನಡ ಸಾಹಿತ್ಯವನ್ನು ಕಬ್ಬಿಣದ ಕಡಲೆ ಅಂದುಕೊಳ್ಳುತ್ತಾರೆ. ನಡುಗನ್ನಡ ಸಾಹಿತ್ಯದಿಂದ ದೂರ ಆಗುತ್ತಿದ್ದಾರೆ. ಅವರಿಗೆ ಆಧುನಿಕ ಕನ್ನಡ ಸಾಹಿತ್ಯವನ್ನೂ ತಿಳಿಸುವ ಅನಿವಾರ್ಯತೆ ಬಂದಿದೆ. ಅಕಾಡೆಮಿ ಮತ್ತು ಪ್ರಾಧಿಕಾರಗಳು ಪ್ರಕಟಿಸುತ್ತಿರುವ ಪುಸ್ತಕಗಳು ವಿಶ್ವವಿದ್ಯಾಲಯಗಳ ಸಂಶೋಧನಾ ವಿದ್ಯಾರ್ಥಿಗಳಿಗೆ ಆಕರ ಗ್ರಂಥಗಳಾಗುತ್ತವೆ. ಆದ್ದರಿಂದ ವಿಶ್ವವಿದ್ಯಾಲಯಗಳಿಗೆ ಪುಸ್ತಕಗಳನ್ನು ತಲುಪಿಸುವ ಕೆಲಸವಾಗಬೇಕು' ಎಂದು ಅಭಿಪ್ರಾಯಪಟ್ಟರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಕೆ.ಎಂ. ಗಾಯಿತ್ರಿ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ, ಪುಸ್ತಕದ ಸಂಪಾದಕರಾದ ಶಾ.ಮಂ. ಕೃಷ್ಣರಾಯ, ಲಕ್ಷ್ಮಣ ಕೊಡಸೆ ಉಪಸ್ಥಿತರಿದ್ದರು.




**ಸಮಾರಂಭದಲ್ಲಿ ಸಿ. ರಮಾಕುಮಾರಿ ಸಿದ್ಧಲಿಂಗಯ್ಯ, ಸಾವಿತ್ರಿ ಮುಜುಮದಾರ, ಕೆ.ಎಂ. ಗಾಯಿತ್ರಿ, ಮಾನಸ, ಅಲ್ಲಮಪ್ರಭು ಬೆಟ್ಟದೂರು, ಶಾ.ಮಂ. ಕೃಷ್ಣರಾಯ ಮತ್ತು ಲಕ್ಷ್ಮಣ ಕೊಡಸೆ ಉಪಸ್ಥಿತರಿದ್ದರು.**

### ವಿವಿಗಳಿಗೆ ಪುಸ್ತಕಗಳನ್ನು ತಲುಪಿಸಬೇಕು..

ಬಿಡುಗಡೆಯಾದ ಸಾಹಿತ್ಯ ಸಂಪುಟಗಳ ಬಗ್ಗೆ ಮಾತನಾಡಿದ ಲೇಖಕಿ ಸಾವಿತ್ರಿ ಮುಜುಮದಾರ, 'ಯುವಜನರು ಹಳಗನ್ನಡ ಸಾಹಿತ್ಯವನ್ನು ಕಬ್ಬಿಣದ ಕಡಲೆ ಅಂದುಕೊಳ್ಳುತ್ತಾರೆ. ನಡುಗನ್ನಡ ಸಾಹಿತ್ಯದಿಂದ ದೂರ ಆಗುತ್ತಿದ್ದಾರೆ. ಅವರಿಗೆ ಆಧುನಿಕ ಕನ್ನಡ ಸಾಹಿತ್ಯವನ್ನೂ ತಿಳಿಸುವ ಅನಿವಾರ್ಯತೆ ಬಂದಿದೆ. ಅಕಾಡೆಮಿ ಮತ್ತು ಪ್ರಾಧಿಕಾರಗಳು ಪ್ರಕಟಿಸುತ್ತಿರುವ ಪುಸ್ತಕಗಳು ವಿಶ್ವವಿದ್ಯಾಲಯಗಳ ಸಂಶೋಧನಾ ವಿದ್ಯಾರ್ಥಿಗಳಿಗೆ ಆಕರ ಗ್ರಂಥಗಳಾಗುತ್ತವೆ. ಆದ್ದರಿಂದ ವಿಶ್ವವಿದ್ಯಾಲಯಗಳಿಗೆ ಪುಸ್ತಕಗಳನ್ನು ತಲುಪಿಸುವ ಕೆಲಸವಾಗಬೇಕು' ಎಂದು ಅಭಿಪ್ರಾಯಪಟ್ಟರು.

# ಪಂಚ ಗ್ಯಾರಂಟಿ ಯೋಜನೆಗಳ ಜಾರಿಯಿಂದ ಆರ್ಥಿಕ ಸಬಲೀಕರಣ:

## ಯೋಜನೆ ಮತ್ತು ಸಾಂಖ್ಯಿಕ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್ ಅಭಿಮತ

**79ನೇ ಸ್ವಾತಂತ್ರ್ಯೋತ್ಸವದಲ್ಲಿ ಧ್ವಜಾ ರೋಹಣ**



**ನಗರದ ಮುರುಘರಾಜೇಂದ್ರ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತದಿಂದ ಆಯೋಜಿಸಲಾದ 79ನೇ ಸ್ವಾತಂತ್ರ್ಯೋತ್ಸವದಲ್ಲಿ ಧ್ವಜಾರೋಹಣ ನೆರವೇರಿಸಿದರು..**

### ಹಕ್ಕು ಪತ್ರಗಳ ವಿತರಣೆ:

ಜಿಲ್ಲೆಯಲ್ಲಿ ಜನವಸತಿ ಇರುವ 296 ಗ್ರಾಮಗಳಿಗೆ ಕಂದಾಯ ಗ್ರಾಮದ ಮಾನ್ಯತೆ ನೀಡಲು ಗುರುತಿಸಲಾಗಿದೆ. ಈ ಗ್ರಾಮಗಳಲ್ಲಿ ವಾಸಿಸುವ ಕುಟುಂಬಗಳಿಗೆ ಹಕ್ಕು ಪತ್ರಗಳನ್ನು ನೀಡಲಾಗುವುದು. ಈಗಾಗಲೇ 5174 ಫಲಾನುಭವಿಗಳನ್ನು ಗುರುತಿಸಲಾಗಿದೆ. ಮುಂದಿನ ದಿನಗಳಲ್ಲಿ 7976 ಹಕ್ಕು ಪತ್ರಗಳನ್ನು ವಿತರಿಸುವ ಗುರಿಯನ್ನು ಹೊಂದಲಾಗಿದೆ.

### ಆಕರ್ಷಕ ಪಥ ಸಂಚಲನ:

ಭಾರತ ಸ್ವಾತಂತ್ರ್ಯ ದಿನಾಚರಣೆಯ ಪಥ ಸಂಚಲನದಲ್ಲಿ ಡಿಎಆರ್ ಆರ್‌ಪಿಐ ಜೆ.ಬಿ.ಶಿವರಾಜ್ ಅವರು ಪೇರಡ್ ಕಮಾಂಡರ್ ಆಗಿ ಕಾರ್ಯನಿರ್ವ ಹಿಸಿದರು. ನಾಗರಿಕ ಪೊಲೀಸ್, ಸಶಸ್ತ್ರ ಪೊಲೀಸ್, ಅರಣ್ಯ, ಗೃಹ ರಕ್ಷಕದಳ, ಎನ್.ಸಿ.ಸಿ, ಸೌಟ್ಸ್ ಮತ್ತು ಗೈಡ್ಸ್ ಸೇರಿದಂತೆ ಹಲವು ಶಾಲಾ ವಿದ್ಯಾರ್ಥಿಗಳು ಆಕರ್ಷಕ ಪಥ ಸಂಚಲನ ನಡೆಸಿದರು. ಪೊಲೀಸ್ ವಾದ್ಯ ವೃಂದ ಕವಾಯತಿನಲ್ಲಿ ಸುಶ್ರಾವ್ಯವಾಗಿ ವಾದ್ಯ ನುಡಿಸಿದರು.



"ಪಂಚ ಗ್ಯಾರಂಟಿಗಳು ಪ್ರತಿಯೊಬ್ಬರೂ ಸಮಾಜದಲ್ಲಿ ಘನತೆಯಿಂದ ಬದುಕಲು ದಾರಿ ಮಾಡಿಕೊಟ್ಟಿವೆ. ರಾಷ್ಟ್ರಕವಿ ಕುವೆಂಪು ಅವರ "ಬಡತನವ ಬುಡಮಟ್ಟ ಕೀಳಬನ್ನಿ" ಎನ್ನುವ ಆಶಯವನ್ನು ಸಾಕರಗೊಳಿಸುವ ನಿಟ್ಟಿನಲ್ಲಿ ನಮ್ಮ ಸರ್ಕಾರ ಬದ್ದವಾಗಿದೆ. ಬಡತನ ನಿವಾರಣೆ, ಉದ್ಯೋಗ ಅವಕಾಶ ಹೆಚ್ಚಿಸಲು ಪ್ರನಾಳಿಕೆಯಲ್ಲಿ ಘೋಷಿಸಿದ ಯೋಜನೆಗಳನ್ನು ಜಾರಿ ಮಾಡಿ ಸರ್ಕಾರ ನುಡಿದಂತೆ ನಡೆದಿದೆ.

**■ ಸಚಿವ ಡಿ.ಸುಧಾಕರ್, ಜಿಲ್ಲಾ ಉಸ್ತುವಾರಿ ಸಚಿವರು**

**ಚಿತ್ರದುರ್ಗ:** ದೇಶದ ಇತಿಹಾಸದಲ್ಲಿಯೇ ಮೊದಲು ಬಾರಿಗೆ ರಾಜ್ಯದಲ್ಲಿ ಜಾರಿಗೆ ತಂದ ಪಂಚ ಗ್ಯಾರಂಟಿ ಯೋಜನೆಗಳು, ನಿರ್ಗತಿಕರು, ಬಡವರು, ಕೆಳವರ್ಗದವರು, ಸಮಾಜದ ಅಂಚಿನಲ್ಲಿರುವವರು ಹಾಗೂ ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಸಹಾಯಕವಾಗಿವೆ ಎಂದು ಯೋಜನೆ ಮತ್ತು ಸಾಂಖ್ಯಿಕ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್ ಹೇಳಿದರು.

ನಗರದ ಮುರುಘರಾಜೇಂದ್ರ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತದಿಂದ ಆಯೋಜಿಸಲಾದ 79ನೇ ಸ್ವಾತಂತ್ರ್ಯೋತ್ಸವದಲ್ಲಿ ಧ್ವಜಾರೋಹಣ ನೆರವೇರಿಸಿ, ಕವಾಯತು ತಂಡಗಳಿಂದ ಗೌರವ ವಂದನೆ ಸ್ವೀಕರಿಸಿ ಅವರು ಮಾತನಾಡಿದರು.

ಪಂಚ ಗ್ಯಾರಂಟಿಗಳು ಪ್ರತಿಯೊಬ್ಬರೂ ಸಮಾಜದಲ್ಲಿ ಘನತೆಯಿಂದ ಬದುಕಲು ದಾರಿ ಮಾಡಿಕೊಟ್ಟಿವೆ. ರಾಷ್ಟ್ರಕವಿ ಕುವೆಂಪು ಅವರ "ಬಡತನವ ಬುಡಮಟ್ಟ ಕೀಳಬನ್ನಿ" ಎನ್ನುವ ಆಶಯವನ್ನು ಸಾಕರಗೊಳಿಸುವ ನಿಟ್ಟಿನಲ್ಲಿ ನಮ್ಮ ಸರ್ಕಾರ ಬದ್ದವಾಗಿದೆ. ಬಡತನ ನಿವಾರಣೆ, ಉದ್ಯೋಗ ಅವಕಾಶ ಹೆಚ್ಚಿಸಲು ಪ್ರನಾಳಿಕೆಯಲ್ಲಿ ಘೋಷಿಸಿದ ಯೋಜನೆಗಳನ್ನು ಜಾರಿ ಮಾಡಿ ಸರ್ಕಾರ ನುಡಿದಂತೆ ನಡೆದಿದೆ ಎಂದು ಸಚಿವ ಡಿ.ಸುಧಾಕರ್ ಹೇಳಿದರು.

ಅನ್ನಭಾಗ್ಯ, ಗೃಹಲಕ್ಷ್ಮಿ, ಶಕ್ತಿಯೋಜನೆ, ಗೃಹಜ್ಯೋತಿ, ಯುನಿಧಿ ಯೋಜನೆಗಳು ರಾಜ್ಯಾದ್ಯಂತ ಯಶಸ್ವಿಯಾಗಿ ಜಾರಿಗೊಳಿಸಲಾಗಿದೆ. ಅನ್ನಭಾಗ್ಯ ಯೋಜನೆಯಡಿ ಚಿತ್ರದುರ್ಗ ಜಿಲ್ಲೆಯಲ್ಲಿ ಅಂತ್ಯೋದಯ ಮತ್ತು ಬಿ.ಪಿ.ಎಲ್. ಪಡಿತರ ಚೀಟಿಯಲ್ಲಿರುವ ಪ್ರತಿ ಸದಸ್ಯರಿಗೆ ರೂ.170/-ರಂತೆ ಡಿ.ಬಿ.ಟಿ ಮೂಲಕ ಜುಲೈ 2023 ರಿಂದು ಡಿಸೆಂಬರ್-2024 ರವರೆಗೆ ಒಟ್ಟು ರೂ.370.01 ಕೋಟಿ ಹಣವನ್ನು ಕುಟುಂಬದ ಮುಖ್ಯಸ್ಥರ ಬ್ಯಾಂಕ್ ಖಾತೆಗೆ ಪಾವತಿಮಾಡಲಾಗಿದೆ. ಜೊತೆಗೆ ಪ್ರತಿ ಸದಸ್ಯರಿಗೆ ಡಿ.ಬಿ.ಟಿ ಹಣದ ಬದಲಾಗಿ ಫೆಬ್ರವರಿ-2025ರ ಮಾಹೆಯಿಂದ ಪ್ರತಿ ಫಲಾನುಭವಿಗಳಿಗೆ ಹೆಚ್ಚುವರಿ 05 ಕೆ.ಜಿ ಯಂತೆ ಪ್ರತಿ ಮಾಹೆಗೆ 6313 ಮೆಟ್ರಿಕ್ ಟನ್ ಅಕ್ಕಿಯನ್ನು ವಿತರಣೆ ಮಾಡಲಾಗುತ್ತಿದೆ. ಗೃಹ ಜ್ಯೋತಿ ಯೋಜನೆಯಡಿ ಜಿಲ್ಲೆಯಲ್ಲಿ 3,78,367 ಫಲಾನುಭವಿಗಳಿದ್ದು, ಈವರೆಗೆ ಒಟ್ಟು ರೂ.343.87 ಕೋಟಿ ವ್ಯಯ ಮಾಡಲಾಗಿದೆ. ಮಹಿಳೆಯರ ಆರ್ಥಿಕವಾಗಿ ಸಬಲೀಕರಣಗೊಳಿಸುವ ನಿಟ್ಟಿನಲ್ಲಿ ಗೃಹಲಕ್ಷ್ಮಿ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಜಿಲ್ಲೆಯಲ್ಲಿ ಮೇ 2025ರ ಅಂತ್ಯದವರೆಗೆ ಒಟ್ಟು 3,87,490 ಫಲಾನುಭವಿಗಳಿಗೆ ರೂ.1,398 ಕೋಟಿ ರೂಪಾಯಿಗಳನ್ನು ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಪಾವತಿಸಲಾಗಿದೆ. ಈ ಗೃಹಲಕ್ಷ್ಮಿ ಯೋಜನೆಯನ್ನು ಲಿಂಗತ್ವ ಅಲ್ಪಸಂಖ್ಯಾತರಿಗೂ ವಿಸ್ತರಿಸಿದ ಫಲವಾಗಿ ಜಿಲ್ಲೆಯಲ್ಲಿ 28 ಜನ ಲಿಂಗತ್ವ ಅಲ್ಪಸಂಖ್ಯಾತರು ಈ ಯೋಜನೆಯ ಸೌಲಭ್ಯ ಪಡೆಯುತ್ತಿದ್ದಾರೆ. ಯುವನಿಧಿ ಯೋಜನೆಯಡಿಯಲ್ಲಿ ಜನವರಿ 2024 ರಿಂದ ಮೇ-2025ರವರೆಗೆ ಒಟ್ಟು ರೂ.15 ಕೋಟಿ ಯುವ-ನಿರುದ್ಯೋಗಿಗಳ ಖಾತೆಗೆ ನೇರಪಾವತಿ ಮಾಡಲಾಗಿದೆ. ಶಕ್ತಿ ಯೋಜನೆಯಡಿ ಜಿಲ್ಲಾ ವಿಭಾಗದ ಸರ್ಕಾರಿ ಬಸ್‌ಗಳಲ್ಲಿ 5 ಕೋಟಿಗೂ ಅಧಿಕ ಮಹಿಳೆಯರು ಪ್ರಯಾಣಿಸಿದ್ದಾರೆ. ಯೋಜನೆಗೆ ಜಿಲ್ಲೆಯಲ್ಲಿ ಒಟ್ಟು ರೂ. 208 ಕೋಟಿ ರೂಪಾಯಿ ಖರ್ಚುಮಾಡಲಾಗಿದೆ ಎಂದು ಸಚಿವ ಡಿ.ಸುಧಾಕರ್ ಮಾಹಿತಿ ನೀಡಿದರು.

ಮಹತ್ವಾಂಕಾಂಕ್ಷಿ ಭದ್ರಾ ಮೇಲ್ದಂಡೆ ಯೋಜನೆಯು ಸಾಕಾರಗೊಳ್ಳುವ ದಿನಗಳು ಸಮೀಪಿಸುತ್ತಿವೆ. ಈ ಯೋಜನೆಯನ್ನು ರಾಷ್ಟ್ರೀಯ ಯೋಜನೆಯನ್ನಾಗಿ ಪರಿಗಣಿಸುವಂತೆ ಈಗಾಗಲೇ ಶಿಫಾರಸ್ಸು ಮಾಡಲಾಗಿರುತ್ತದೆ. ಈ ಯೋಜನೆಯಡಿ ಚಿತ್ರದುರ್ಗ ಜಿಲ್ಲೆಯ ಹಿರಿಯೂರು, ಚಳ್ಳಕೆರೆ, ಚಿತ್ರದುರ್ಗ, ಹೊಳಲ್ಕೆರೆ ತಾಲ್ಲೂಕುಗಳಡಿಯಲ್ಲಿನ ಒಟ್ಟು 73,946 ಹೆಕ್ಟೇರ್ ಪ್ರದೇಶಕ್ಕೆ ಹನಿನೀರಾವರಿ ಮೂಲಕ ನೀರೊದಗಿಸಲು ಹಾಗೂ 86 ಕೆರೆಗಳಿಗೆ ಕುಡಿಯುವ ನೀರು ಪೂರೈಸಲು ರೂ. 2677 ಕೋಟಿಗಳ ವೆಚ್ಚದಲ್ಲಿ 06 ಪ್ಯಾಕೇಜ್‌ಗಳಲ್ಲಿ ಈಗಾಗಲೇ ಟೆಂಡರ್ ಕರೆಯಲಾಗಿದೆ. ಮುಂದಿನ ದಿನಗಳಲ್ಲಿ ಬರದ ನಾಡು ಚಿತ್ರದುರ್ಗ, ಕೃಷಿಯ ನಾಡಾಗಿ ಬದಲಾಗಿಸಲು ನಮ್ಮ ಸರ್ಕಾರ ಕಂಕಣಬದ್ಧವಾಗಿದೆ. ರಾಜ್ಯದ ಸಮಗ್ರ ಅಭಿವೃದ್ಧಿ ಅದರಲ್ಲೂ ಗ್ರಾಮೀಣ ಅಭಿವೃದ್ಧಿಗೆ ಸರ್ಕಾರ ಬದ್ಧವಾಗಿದೆ. ವಿದ್ಯಾಭ್ಯಾಸಕ್ಕೆ ಆದ್ಯತೆಯನ್ನು ನೀಡುತ್ತಿದೆ. ಸಂಧ್ಯಾ ಸುರಕ್ಷಾ ಯೋಜನೆಯಡಿ, ವೃದ್ಧಾಪ್ಯ ವೇತನ, ವಿಧವಾ ವೇತನ, ವಿಕಲ ಚೇತನ ಮಾಶಾಸನ ಜೊತೆಗೆ ಮಾತೃಪೂರ್ಣ ಯೋಜನೆ, ಪೊ?ಷಣೆ ಅಭಿಯಾನ ಯೋಜನೆ, ಪ್ರಧಾನ ಮಂತ್ರಿ ಮಾತೃವಂದನಾ ಯೋಜನೆ, ಸ್ವಾಧಾರ ಯೋಜನೆ, ಸಾಂತ್ವನ ಯೋಜನೆಗಳ ಮುಖಾಂತರ ಎಲ್ಲ ವರ್ಗದವರ ಏಳಿಗೆಗಾಗಿ ನಮ್ಮ ಸರ್ಕಾರವು ನಿರಂತರವಾಗಿ ಶ್ರಮಿಸುತ್ತಿದೆ ಎಂದು ಸಚಿವ ಡಿ.ಸುಧಾಕರ್ ಹೇಳಿದರು. ಇದೇ ವೇಳೆ ಸಚಿವ ಡಿ.ಸುಧಾಕರ್ ತುರವನೂರು ಗ್ರಾಮದಲ್ಲಿ ನಡೆದ ಈಚಲು ಮರದ ಸತ್ಯಾಗ್ರಹಕ್ಕೆ ಹಾಗೂ ಸ್ವಾತಂತ್ರ್ಯ ಹೋರಾಟದಲ್ಲಿ ಜಿಲ್ಲೆಯ ಮಹನೀಯರ ಕೊಡುಗೆಗಳನ್ನು ಸ್ಮರಿಸಿದರು.

# ‘ವಿಮೆ: ಲಿಂಗತ್ವ ಅಲ್ಪಸಂಖ್ಯಾತರಿಗೆ ಭರವಸೆ’


ಮೈಸೂರಿನ ಕಾಂಗ್ರೆಸ್ ಭವನದಲ್ಲಿ ನಡೆದ ಮಲ್ಲಿಕಾರ್ಜುನ ಖರ್ಗೆ ಜನ್ಮದಿನಾಚರಣೆಯಲ್ಲಿ ಕೆಪಿಸಿಸಿ ಉಪಾಧ್ಯಕ್ಷರಾದ ಅಕ್ಕೈ ಪದ್ಮಸಾಲಿ ಅವರು ಲಿಂಗತ್ವ ಅಲ್ಪಸಂಖ್ಯಾತರಿಗೆ ಇನ್ಶುರೆನ್ಸ್ ಬಾಂಡ್ ವಿತರಿಸಿದರು

### ಮಲ್ಲಿಕಾರ್ಜುನ ಖರ್ಗೆ ಜನ್ಮದಿನಾಚರಣೆ; ಕಾಂಗ್ರೆಸ್ ಪ್ರಚಾರ ಸಮಿತಿಯಿಂದ ವಿತರಣೆ

**ರಾಜಕೀಯ ಪ್ರಾತಿನಿಧ್ಯ ನೀಡಿ:** ಲಿಂಗತ್ವ ಅಲ್ಪಸಂಖ್ಯಾತರಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸಂವಿಧಾನಾತ್ಮಕವಾಗಿ ರಾಜಕೀಯ ಪ್ರಾತಿನಿಧ್ಯ ನೀಡಲು ಮುಂದಾಗಬೇಕು. ಕಾಂಗ್ರೆಸ್ ಪಕ್ಷದಿಂದಲೂ ಶಾಸನ ಸಭೆಗಳ ಸದಸ್ಯರ ಆಯ್ಕೆಯಲ್ಲಿ ಶೇ 1ರಷ್ಟು ಮೀಸಲಾತಿ ನೀಡಬೇಕು’ ಎಂದು ಅಕ್ಕೈ ಪದ್ಮಸಾಲಿ ಒತ್ತಾಯಿಸಿದರು. ಲಿಂಗದ ಪರಿಮಿತಿ ದಾಟಿದರೆ, ಬಹುದೊಡ್ಡ ವೈವಿಧ್ಯದ ಸಮುದಾಯವಾಗಿ ದೇಶದಲ್ಲಿ ಶೇ 10ರಷ್ಟು ನಾವಿದ್ದೇವೆ. ಅವರಲ್ಲಿ ಲಿಂಗತ್ವ ಅಲ್ಪಸಂಖ್ಯಾತರೆಂದು ಗುರುತಿಸಿಕೊಂಡವರೇ ಶೇ 3ರಷ್ಟಿದ್ದೇವೆ. ರಾಜಕೀಯ ಪ್ರಾತಿನಿಧ್ಯ ನಮ್ಮ ಹಕ್ಕು’ ಎಂದರು.

**ಮೈಸೂರು:** ನಗರ ಹಾಗೂ ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿಯಿಂದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ 83ನೇ ಜನ್ಮದಿನದ ಪ್ರಯುಕ್ತ ಇಲ್ಲಿನ ಕಾಂಗ್ರೆಸ್ ಭವನದಲ್ಲಿ 50 ಮಂದಿ ಲಿಂಗತ್ವ ಅಲ್ಪಸಂಖ್ಯಾತರಿಗೆ ಇನ್ಶುರೆನ್ಸ್ ಬಾಂಡ್ ವಿತರಿಸಲಾಯಿತು.

ಬಾಂಡ್ ವಿತರಿಸಿದ ಲಿಂಗತ್ವ ಅಲ್ಪಸಂಖ್ಯಾತರ ಹೋರಾಟಗಾರ್ತಿ, ಕೆಪಿಸಿಸಿ ಉಪಾಧ್ಯಕ್ಷರಾದ ಅಕ್ಕೈ ಪದ್ಮಸಾಲಿ, ‘1970ರಲ್ಲಿ ಮುಂಬೈನಲ್ಲಿ ಹೆಚ್ಚು ವಾಸಿಸುತ್ತಿದ್ದ ನಮ್ಮ ಸಮುದಾಯವು ಅಂದಿನ ಪ್ರಧಾನಿ ಇಂದಿರಾ ಗಾಂಧಿಯವರಿಗೆ ಕೆಲ ಸೌಲಭ್ಯ ನೀಡುವಂತೆ ಕೋರಿತ್ತು. ಆಗ ದೇಶದಾದ್ಯಂತ ಉಚಿತ ರೈಲು ಪ್ರಯಾಣ ಘೋಷಿಸಿದ್ದರು. ಇಂದು ರಾಜ್ಯ ಕಾಂಗ್ರೆಸ್ ಸರ್ಕಾರ ನಮ್ಮ ಸಮುದಾಯಕ್ಕೂ ಗ್ಯಾರಂಟಿಗಳನ್ನು ವಿಸ್ತರಿಸಿದೆ. ಈಗ ವಿಮೆ ನೀಡಿ ಹೊಸ ಭರವಸೆಗೆ ಕಾರಣವಾಗಿದೆ’ ಎಂದು ಸ್ಮರಿಸಿದರು. **ಬೇಡವಾದ ಮಕ್ಕಳ ಸ್ವೀಕಾರ:** ‘ನಾವು ಅಪ್ಪ ಅಮ್ಮನಿಗೆ, ಅಕ್ಕಪಕ್ಕದವರಿಗೆ, ಶಿಕ್ಷಣ ವ್ಯವಸ್ಥೆಗೆ, ಸಮಾಜಕ್ಕೆ, ವೈದ್ಯಕೀಯ ಕ್ಷೇತ್ರಕ್ಕೆ ಹಾಗೂ ಸಂಸ್ಕೃತಿಗೂ ಬೇಡವಾದ ಮಕ್ಕಳು. ಲೋಕಕ್ಕೆ, ಪ್ರಕೃತಿಗೆ ಸವಾಲಾಗಿರುವ ನಮ್ಮನ್ನು ಎಲ್ಲಾ ಕಡೆ ಬೇಡ ಎನ್ನುವಾಗ ಕಾಂಗ್ರೆಸ್ ಮಾತ್ರ ‘ನೀವು ಬೇಕು’ ಎಂದು ನಮಗೆ ಅವಕಾಶ ನೀಡುತ್ತಿದೆ’ ಎಂದು ಶ್ಲಾಘಿಸಿದರು.

‘ಲಿಂಗತ್ವ ಅಲ್ಪಸಂಖ್ಯಾತರಿಗೆ ವಿಮೆಯ ಬಾಂಡ್ ವಿತರಿಸುತ್ತಿರುವುದು ರಾಜ್ಯದ ಇತಿಹಾಸದಲ್ಲಿಯೇ ಅವಿಸ್ಮರಣೀಯ ಕ್ಷಣ. ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷರ ಜನ್ಮದಿನವನ್ನು ಕೇಕ್ ಕಟ್ ಮಾಡಿ ಸಂಭ್ರಮಿಸುತ್ತಿಲ್ಲ. ಬದಲಿಗೆ ಪುಣ್ಯದ ಕೆಲಸ ಮಾಡುತ್ತಿ ದ್ದೇವೆ’ ಎಂದು ಮೈಸೂರು ಗ್ರಾಮಾಂತರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಬಿ.ಜೆ.ವಿಜಯ್ ಕುಮಾರ್ ಹೇಳಿದರು.

‘ಮೈಸೂರು ನಗರ ಹಾಗೂ ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿಯಿಂದ ಮೊದಲ ಕಂತಿನ ಹಣವನ್ನು ಕಟ್ಟಿ ಇನ್ಶೂರೆನ್ಸ್ ಮಾಡಿಸಿದ್ದು, ಮುಂದಿನ ಕಂತುಗಳನ್ನು ಕಟ್ಟಿಕೊಂಡು ಹೋಗಬೇಕು. ಅಪಘಾತ ಸಂಭವಿಸಿದಾಗ 1 ಲಕ್ಷವನ್ನು ವಿಮೆ ಕಂಪನಿ ಕಟ್ಟಿಕೊಡಲಿದೆ’ ಎಂದು ತಿಳಿಸಿದರು.

ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಮಾಜಿ ಸಚಿವ ಕೋಟೆ ಎಂ.ಶಿವಣ್ಣ, ಕಾಂಗ್ರೆಸ್ ನಗರ ಘಟಕದ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ರವಿ ಮಾವಿನಹಳ್ಳಿ, ನಗರ ಪ್ರಚಾರ ಸಮಿತಿ ಅಧ್ಯಕ್ಷ ರಘುರಾಜೇ ಅರಸ್, ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದ ಪ್ರಣತಿ ಪ್ರಕಾಶ್ ಹಾಜರಿದ್ದರು.

ಲಿಂಗತ್ವ ಅಲ್ಪಸಂಖ್ಯಾತರಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸಂವಿಧಾನಾತ್ಮಕವಾಗಿ ರಾಜಕೀಯ ಪ್ರಾತಿನಿಧ್ಯ ನೀಡಲು ಮುಂದಾಗಬೇಕು. ಕಾಂಗ್ರೆಸ್ ಪಕ್ಷದಿಂದಲೂ ಶಾಸನ ಸಭೆಗಳ ಸದಸ್ಯರ ಆಯ್ಕೆಯಲ್ಲಿ ಶೇ 1ರಷ್ಟು ಮೀಸಲಾತಿ ನೀಡಬೇಕು’ ಎಂದು ಅಕ್ಕೈ ಪದ್ಮಸಾಲಿ ಒತ್ತಾಯಿಸಿದರು. ಲಿಂಗದ ಪರಿಮಿತಿ ದಾಟಿದರೆ, ಬಹುದೊಡ್ಡ ವೈವಿಧ್ಯದ ಸಮುದಾಯವಾಗಿ ದೇಶದಲ್ಲಿ ಶೇ 10ರಷ್ಟು ನಾವಿದ್ದೇವೆ. ಅವರಲ್ಲಿ ಲಿಂಗತ್ವ ಅಲ್ಪಸಂಖ್ಯಾತರೆಂದು ಗುರುತಿಸಿಕೊಂಡವರೇ ಶೇ 3ರಷ್ಟಿದ್ದೇವೆ. ರಾಜಕೀಯ ಪ್ರಾತಿನಿಧ್ಯ ನಮ್ಮ ಹಕ್ಕು’ ಎಂದರು.

**ದಸರಾ ವೇಳೆ ಕಾಮಗಾರಿ ಪೂರ್ಣ:** ದಸರಾ ವಸ್ತುಪ್ರದರ್ಶನ ಆವರಣದಲ್ಲಿ ನಡೆಯುತ್ತಿರುವ ಕಾಮಗಾರಿಗಳು ದಸರಾ ವೇಳೆಗೆ ಪೂರ್ಣಗೊಳ್ಳುವ ವಿಶ್ವಾಸವಿದೆ’ ಎಂದು ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ತಿಳಿಸಿದರು. ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ‘ರಾಜ್ಯ ಸರ್ಕಾರದಿಂದ ಅಂದಾಜು ? 24 ಕೋಟಿ ಅನುದಾನ ಬಿಡುಗಡೆಯಾಗಿದ್ದು, ಕಾಮಗಾರಿ ಆರಂಭಿಸಿದ್ದೇವೆ. ತರಾತುರಿಯಲ್ಲಿ ಕಾಮಗಾರಿ ಆರಂಭಿಸಿಲ್ಲ’ ಎಂದರು.

# ಘಾನಾದ ಬಾಲಕನಿಗೆ ಹೃದಯ ಶಸ್ತ್ರಚಿಕಿತ್ಸೆ


ಶಸ್ತ್ರಚಿಕಿತ್ಸೆಗೆ ಒಳಗಾದ ಬಾಲಕನೊಂದಿಗೆ ಸಂಸ್ಥೆಯ ನಿರ್ದೇಶಕ ಡಾ.ಕೆ.ಎಸ್. ರವೀಂದ್ರನಾಥ್ ಹಾಗೂ ಸಂಸ್ಥೆಯ ವೈದ್ಯರ ತಂಡ.

**ಬೆಂಗಳೂರು:** ಹೃದಯ ಸಂಬಂಧಿ ಗಂಭೀರ ಸಮಸ್ಯೆಯಿಂದ ಬಳಲುತ್ತಿದ್ದ ಆಫ್ರಿಕಾ ಖಂಡದ ಘಾನಾದ ಆರು ವರ್ಷದ ಬಾಲಕನಿಗೆ ಇಲ್ಲಿನ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ವೈದ್ಯರು ಯಶಸ್ವಿಯಾಗಿ ತೆರೆದ ಹೃದಯ ಶಸ್ತ್ರಚಿಕಿತ್ಸೆ ನಡೆಸಿದ್ದಾರೆ.

ಎದೆ ನೋವು ಮತ್ತು ಉಸಿರಾಟ ಸಮಸ್ಯೆಯ ಲಕ್ಷಣಗಳೊಂದಿಗೆ ಸಂಸ್ಥೆಗೆ ಜುಲೈ 23ರಂದು ಭೇಟಿ ನೀಡಿದ್ದ ಬಾಲಕನನ್ನು ದಾಖಲಿಸಿಕೊಳ್ಳಲಾಯಿತು. ಘಾನಾದಲ್ಲಿ ಸಂಕೀರ್ಣ ಹೃದಯ ಶಸ್ತ್ರಚಿಕಿತ್ಸೆಗೆ ಸೌಲಭ್ಯವಿಲ್ಲದಿರುವುದರಿಂದ ಇಲ್ಲಿಗೆ ಕರೆತರಲಾಗಿತ್ತು. ಬಾಲಕನ ಹೃದಯದ ಬಲ ಕುಹರದ ಹೊರ ಹರಿವಿನಲ್ಲಿ ಅಡಚಣೆ (ಆರ್‌ವಿಒಟಿ) ಇರುವುದು ಪರೀಕ್ಷೆಯಿಂದ ದೃಢಪಟ್ಟಿತು. ಜುಲೈ 29ರಂದು ಶಸ್ತ್ರಚಿಕಿತ್ಸೆ ನಡೆಸಲಾಗಿತ್ತು. ಆ.8ರಂದು ಆಸ್ಪತ್ರೆಯಿಂದ ತೆರಳಿದ್ದು, ಹೃದಯ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಸಂಸ್ಥೆಯ ವೈದ್ಯರು ತಿಳಿಸಿದ್ದಾರೆ.

ಸಂಸ್ಥೆಯ ಮಕ್ಕಳ ಹೃದ್ರೋಗ ವಿಜ್ಞಾನದ ಪ್ರಾಧ್ಯಾಪಕ ಡಾ. ಜಯರಂಗನಾಥ್ ಮತ್ತು ಅವರ ತಂಡವು ಹೃದಯ ಶಸ್ತ್ರಚಿಕಿತ್ಸೆಗೆ ಶಿಫಾರಸು ಮಾಡಿತ್ತು. ಡಾ.ಪಿ.ಕೆ. ಸುನಿಲ್ ನೇತೃತ್ವದಲ್ಲಿ ವೈದ್ಯರ ತಂಡ ಈ ಶಸ್ತ್ರಚಿಕಿತ್ಸೆ ನಡೆಸಿದ್ದು, ಡಾ. ರಶ್ಮಿ, ಡಾ. ಹರೀಶ ಮುಖ್ರಿ ಹಾಗೂ ಡಾ. ಪುಷ್ಪ ಅವರನ್ನು ಈ ತಂಡ ಒಳಗೊಂಡಿದೆ.

ಘಾನಾದ ರೋಟರಿ ಇಂಟರ್ ನ್ಯಾಷನಲ್, ಬೆಂಗಳೂರಿನ ರೋಟರಿ ಇಂಟರ್‌ನ್ಯಾಷನಲ್ ಡಿಸ್ಟ್ರಿಕ್ಟ್ 3190 ಮತ್ತು ರೋಟರಿ ನೀಡಿ ಹಾರ್ಟ್ ಫೌಂಡೇಷನ್ ಸಹಯೋಗದಲ್ಲಿ ಈ ಶಸ್ತ್ರಚಿಕಿತ್ಸೆ ನಡೆಸಲಾಗಿದೆ.

‘ಪ್ರತಿ ಸಾವಿರ ಶಿಶುಗಳಲ್ಲಿ ಎಂಟರಿಂದ ಹತ್ತು ಮಕ್ಕಳಿಗೆ ಈ ರೀತಿ ಸಂಕೀರ್ಣ ಜನ್ಮಜಾತ ಕಾಯಿಲೆ ಇರಲಿದೆ. ಹೃದಯ ರಂಧ್ರಗಳು ಕಾಣಿಸಿಕೊಂಡಾಗ ಜ್ವರ, ಕೆಮ್ಮು, ನ್ಯುಮೋನಿಯಾ, ಬೆಳವಣಿಗೆ ಕುಂಠಿತ, ಚರ್ಮ ಮತ್ತು ಉಗುರುಗಳು ನೀಲಿ ಬಣ್ಣಕ್ಕೆ ತಿರುಗುವಿಕೆ, ತೂಕ ನಷ್ಟದಂತಹ ಲಕ್ಷಣಗಳು ಕಾಣಿಸಿ ಕೊಳ್ಳುತ್ತವೆ’ ಎಂದು ಸಂಸ್ಥೆಯ ನಿರ್ದೇಶಕ ಡಾ.ಕೆ.ಎಸ್. ರವೀಂದ್ರನಾಥ್ ತಿಳಿಸಿದ್ದಾರೆ.

# ಜೋಗದತ್ತ ಪ್ರವಾಸಿಗರ ದಂಡು


ಕಾರ್ಗಲ್ ಸಮೀಪದ ಜೋಗ ಜಲಪಾತ ವೀಕ್ಷಣೆಗೆ ಬಂದಿದ್ದ ಪ್ರವಾಸಿಗರ ದಂಡು.

### ಧುಮ್ಮಿಕ್ಕುತ್ತಿರುವ ಜಲಧಾರೆ; ಸಂಚಾರ ದಟ್ಟಣೆ

**ಜಲಪಾತದ ಪ್ರಮುಖ ವೀಕ್ಷಣಾ ಸ್ಥಳಗಳಾದ ಶಿವಮೊಗ್ಗ ಜಿಲ್ಲೆಯ ಸೀತಾಕಟ್ಟೆ ಸೇತುವೆಯಿಂದ ಕಾರ್ಗಲ್ ಸಾಗರ ಮಾರ್ಗದ ಶಿರೂರು ಕೆರೆಯವರೆಗೂ ಅಂದಾಜು 3 ಕಿ.ಮೀ. ಉದ್ದ ರಸ್ತೆಯ ಇಕ್ಕೆಲಗಳಲ್ಲಿ ವಾಹನ ನಿಲುಗಡೆ ಮಾಡಲಾಗಿತ್ತು. ನಾಡಿನ ಪ್ರಸಿದ್ಧ ಯಾತ್ರಾ ಸ್ಥಳವಾದ ಸಿಗಂದೂರು, ವಡನ್ ಬೈಲು ಮಾರ್ಗಗಳಿಂದ ಸಾವಿರಾರು ಪ್ರವಾಸಿ ವಾಹನಗಳು ಜೋಗಕ್ಕೆ ಆಗಮಿಸುತ್ತಿದ್ದು, ವಾರಾಂತ್ಯದ ಕಾರಣ ಪ್ರವಾಸಿಗರ ಸಂಖ್ಯೆ ಇಮ್ಮಡಿಗೊಂಡಿದೆ.**

**ಕಾರ್ಗಲ್:** ವಿಶ್ವ ವಿಖ್ಯಾತ ಜೋಗ ಜಲಪಾತ ಪ್ರಕೃತಿ ದತ್ತವಾದ ಜಲಸಿರಿಯ ವೈಭವದೊಂದಿಗೆ, ಹಚ್ಚ ಹಸಿರಿನ ಪಶ್ಚಿಮ ಘಟ್ಟಗಳ ಸಾಲಿನಿಂದ ಶರಾವತಿ ಕಣಿವೆಯ ಆಳಕ್ಕೆ ಧುಮ್ಮಿಕ್ಕುತ್ತಿರುವ ರಮ್ಯ ನೋಟದ ವೀಕ್ಷಣೆಗೆ ಸಾವಿರಾರು ಸಂಖ್ಯೆಯಲ್ಲಿ ಪ್ರವಾಸಿಗರು ಇಲ್ಲಿ ಭೇಟಿ ನೀಡಿದರು.

ಕಣಿವೆ ಪ್ರದೇಶದಲ್ಲಿ ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಬೆಟ್ಟ ಗುಡ್ಡಗಳಿಂದ ಹರಿಯುತ್ತಿರುವ ನೀರು ಶರಾವತಿ ನದಿ ಸೇರಿ ಜೋಗ ಜಲಪಾತದಲ್ಲಿ ಧುಮ್ಮಿಕ್ಕುತ್ತಿದೆ. ಸಿಂಹ ಘರ್ಜನೆಯೊಂದಿಗೆ ಬೃಹತ್ ಬಂಡೆಗಳ ಮೇಲೆ ಬಿದ್ದು ಹರಿಯುತ್ತಿರುವ ರೋರರ್, ಬಾಹ್ಯಾಕಾಶಕ್ಕೆ ನುಗ್ಗುವ ನೌಕೆಯಂತೆ ಕಂಗೊಳಿಸುತ್ತಿರುವ ರಾಕೆಟ್, ಭೋರ್ಭಂಡೆಗಳ ಮೇಲೆ ನುಣುಪಾಗಿ ಜಾರುತ್ತಾ ಶರಾವತಿ ಕಣಿವೆಯಾಳಕ್ಕೆ ಸೇರಿಕೊಳ್ಳುವ ರಾಣಿ ಜಲಪಾತದ ದೃಶ್ಯ ನೋಡುಗರನ್ನು ನಿಬ್ಬೆರಗಾಗಿಸುತ್ತಿದೆ.

ಜೋಗ ಜಲಪಾತದತ್ತ ಪ್ರವಾಸಿಗರು ಸಾಗರೋಪಾದಿಯಲ್ಲಿ ಹರಿದು ಬರುತ್ತಿದ್ದು, ಸಂಚಾರ ದಟ್ಟಣೆ ನಿಯಂತ್ರಿಸಲು ಪೊಲೀಸ್ ಇಲಾಖೆ ಹರಸಾಹಸ ಪಡುತ್ತಿದೆ.

ಜಲಪಾತದ ಪ್ರಮುಖ ವೀಕ್ಷಣಾ ಸ್ಥಳಗಳಾದ ಶಿವಮೊಗ್ಗ ಜಿಲ್ಲೆಯ ಸೀತಾಕಟ್ಟೆ ಸೇತುವೆಯಿಂದ ಕಾರ್ಗಲ್ ಸಾಗರ ಮಾರ್ಗದ ಶಿರೂರು ಕೆರೆಯವರೆಗೂ ಅಂದಾಜು 3 ಕಿ.ಮೀ. ಉದ್ದ ರಸ್ತೆಯ ಇಕ್ಕೆಲಗಳಲ್ಲಿ ವಾಹನ ನಿಲುಗಡೆ ಮಾಡಲಾಗಿತ್ತು. ನಾಡಿನ ಪ್ರಸಿದ್ಧ ಯಾತ್ರಾ ಸ್ಥಳವಾದ ಸಿಗಂದೂರು, ವಡನ್ ಬೈಲು ಮಾರ್ಗಗಳಿಂದ ಸಾವಿರಾರು ಪ್ರವಾಸಿ ವಾಹನಗಳು ಜೋಗಕ್ಕೆ ಆಗಮಿಸುತ್ತಿದ್ದು, ವಾರಾಂತ್ಯದ ಕಾರಣ ಪ್ರವಾಸಿಗರ ಸಂಖ್ಯೆ ಇಮ್ಮಡಿಗೊಂಡಿದೆ.

ಜೋಗ ನಿರ್ವಹಣಾ ಪ್ರಾಧಿಕಾರದ 183 ಕೋಟಿ ಮೊತ್ತದ ವಿವಿಧ ಅಭಿವೃದ್ಧಿ ಕಾಮಗಾರಿಗಳು ಭರದಿಂದ ಸಾಗುತ್ತಿರುವುದರಿಂದ ಮೈಸೂರು ಬಂಗಲೆಯ ಮುಂಭಾಗದಿಂದ ಪ್ರವಾಸಿಗರಿಗೆ ಜಲಪಾತ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿದೆ. ಅಂದಾಜು 5 ಸಾವಿರಕ್ಕೂ ಹೆಚ್ಚು ಪ್ರವಾಸಿ ವಾಹನಗಳು ಜೋಗಕ್ಕೆ ಆಗಮಿಸಿದ್ದು, 2 ಲಕ್ಷಕ್ಕೂ ಹೆಚ್ಚಿನ ಪ್ರವೇಶ ಶುಲ್ಕಸಂಗ್ರಹವಾಗಿದೆ ಎಂದು ಪ್ರವಾಸೋದ್ಯಮ ಇಲಾಖೆಯ ಮೂಲಗಳು ತಿಳಿಸಿದೆ. ಜೋಗದ ರಾಣಿ ಫಾಲ್ಸ್ ನೆತ್ತಿಯ ಪ್ರದೇಶದಲ್ಲಿ ನೂತನವಾಗಿ ನಿರ್ಮಾ ಣವಾಗಿರುವ ಪಾರ್ಕಿಂಗ್ ಜಾಗದಲ್ಲಿ ಏಕ ಕಾಲಕ್ಕೆ 500 ವಾಹನಗಳ ನಿಲುಗಡೆ ವ್ಯವಸ್ಥೆ ಮಾಡಲಾಗಿದೆ. ‘ಆದಷ್ಟು ಬೇಗ ಲೋಕಾರ್ಪ ಣೆಗೊಂಡರೆ ಸಂಚಾರ ದಟ್ಟಣೆ ನಿಯಂತ್ರಣ ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಶಾಸಕ ಗೋಪಾಲಕೃಷ್ಣ ಬೇಳೂರು ಗಮನಹರಿಸಬೇಕು’ ಎಂದು ಸ್ಥಳೀಯರು ಮತ್ತು ಪ್ರವಾಸಿಗರು ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ.

### ಅಧ್ಯಕ್ಷ ಅಶೋಕ ದಳವಾಯಿ ಸಲಹೆ

# ಬೆಳೆಗಳ ಮೌಲ್ಯವರ್ಧನೆಗೆ ಆದ್ಯತೆ ನೀಡಿ


ರೈತ ಹುತಾತ್ಮ ದಿನಾಚರಣೆಯಲ್ಲಿ ಅಶೋಕ ದಳವಾಯಿ ಮಾತನಾಡಿದರು.

**ಬೆಂಗಳೂರು:** ‘ಕೃಷಿ, ತೋಟಗಾರಿಕೆ ಬೆಳೆಗಳನ್ನು ಬೆಳೆಯುವ ಜೊತೆಗೆ, ಅವುಗಳನ್ನು ಮೌಲ್ಯವರ್ಧಿಸಿ ಉತ್ಪನ್ನ ಗಳಾಗಿಸಿ ಮಾರಾಟ ಮಾಡುವುದರಿಂದ ಕೃಷಿಯನ್ನು ಲಾಭದಾಯಕವಾಗಿಸ ಬಹುದು’ ಎಂದು ಕೃಷಿ ಬೆಲೆ ಆಯೋಗದ ಅಧ್ಯಕ್ಷ ಅಶೋಕ ದಳವಾಯಿ ಅಭಿಪ್ರಾಯಪಟ್ಟರು.

ಅಖಂಡ ಕರ್ನಾಟಕ ರೈತ ಸಂಘ ಗಾಂಧಿ ಭವನದಲ್ಲಿ ಆಯೋಜಿಸಿದ್ದ ‘45ನೇ ರೈತ ಹುತಾತ್ಮ ದಿನಾಚರಣೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಕೃಷಿ, ತೋಟಗಾರಿಕೆ ಉತ್ಪನ್ನಗಳ ಮೌಲ್ಯವರ್ಧನೆ ಮತ್ತು ಉಪ ಉತ್ಪನ್ನಗಳ ತಯಾರಿಕೆಯೇ ದ್ವಿತೀಯ ಕೃಷಿ (ಸೆಕೆಂಡರಿ ಅಗ್ರಿಕಲ್ಚರ್). ಈ ಸೆಕೆಂಡರಿ ಕೃಷಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹೆಚ್ಚು ಉತ್ತೇಜನ ನೀಡುತ್ತಿದ್ದು, ರೈತರು ಇದರ ಸದುಪಯೋಗ ಮಾಡಿಕೊಂಡರೆ ಕೃಷಿಯಲ್ಲಿ ಲಾಭ ಪಡೆಯ ಬಹುದು’ಎಂದು ಸಲಹೆ ನೀಡಿದರು.

‘ಉಪ ಉತ್ಪನ್ನಗಳ ತಯಾರಿಕೆ ಜೊತೆಗೆ ಮಾರುಕಟ್ಟೆಯನ್ನೂ ಅನ್ವೇಷಿಸಿ ಸ್ಪರ್ಧಾತ್ಮಕ ದರದಲ್ಲಿ ಉತ್ಪನ್ನಗಳ ಮಾರಾಟ ಮಾಡಲು ಸಿದ್ಧರಾಗಬೇಕು’ ಎಂದು ಸಲಹೆ ನೀಡಿದರು.

ಕೃಷಿ ಬೆಲೆ ಆಯೋಗದ ಮಾಜಿ ಅಧ್ಯಕ್ಷ ಹನುಮನಗೌಡ ಬೆಳಗುರ್ಕಿ ಮಾತನಾಡಿ, ‘ದೇಶದಲ್ಲಿ ವಸ್ತುಗಳ ಗರಿಷ್ಠ ಚಿಲ್ಲರೆ ದರ (ಎಂಆರ್‌ಪಿ) ತೆಗೆದು ಹಾಕಬೇಕು. ಎಂಆರ್‌ಪಿ ನಿಯಂತ್ರಣ ವ್ಯವಸ್ಥೆ ಕುಸಿತದಿಂದ ಏಕರೂಪ ಗರಿಷ್ಠ ಚಿಲ್ಲರೆ ದರ ನಿಗದಿ ಸಾಧ್ಯವಾಗಿಲ್ಲ. ನಿಯಂತ್ರಣ ವ್ಯವಸ್ಥೆ ಸರಿದಾರಿಗೆ ತರಲು ಕೇಂದ್ರ ಸರ್ಕಾರದ ಕೃಷಿ ವೆಚ್ಚ ಮತ್ತು ಬೆಲೆಗಳ ಆಯೋಗ(ಸಿಸಿಎಪಿ)ದಂತೆ, ಕಾರ್ಖಾನೆ ಉತ್ಪನ್ನಗಳ ವೆಚ್ಚ ಮತ್ತು ಬೆಲೆ ಆಯೋಗ ರಚಿಸುವ ಅಗತ್ಯವಿದೆ’ ಎಂದು ಪ್ರತಿಪಾದಿಸಿದರು.

ನಿವೃತ್ತ ಐಎಎಸ್ ಅಧಿಕಾರಿ ಶಿವಯೋಗಿ ಕಳಸದ ಮಾತನಾಡಿದರು. ಸಂಘದ ರಾಜ್ಯಾಧ್ಯಕ್ಷ ಮಲ್ಲಿಕಾರ್ಜುನ ವಾಲಿ ಇದ್ದರು.

# ಎಸ್‌ಟಿಪಿ ಕಾಮಗಾರಿ ಕಾಲಮಿತಿಯಲ್ಲಿ ಪೂರ್ಣಗೊಳಿಸಿ


ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ಅವರು ಮೈಲಸಂದ್ರದ ಎಸ್‌ಟಿಪಿ ನಿರ್ಮಾಣದ ಪ್ರಗತಿ ಪರಿಶೀಲಿಸಿದರು.

**ಬೆಂಗಳೂರು:** ಜಲಮಂಡಳಿಯಿಂದ ಹೊಸದಾಗಿ ನಿರ್ಮಿಸುತ್ತಿರುವ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳ (ಎಸ್‌ಟಿಪಿ) ಕಾಮಗಾರಿಯನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸುವಂತೆ ಬೆಂಗಳೂರು ಜಲಮಂಡಳಿ ಅಧ್ಯಕ್ಷ ವಿ. ರಾಮ್‌ಪ್ರಸಾತ್ ಮನೋಹರ್ ಅಧಿಕಾರಿಗಳಿಗೆ ಸೂಚಿಸಿದರು. ಜಲಮಂಡಳಿಯ ವೃಷಭಾವತಿ ವ್ಯಾಲಿಯ(ವಿವಿ) 150 ಎಂಎಲ್‌ಡಿ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕದ (ಎಸ್‌ಟಿಪಿ) ಯೋಜನೆ ಹಾಗೂ ಮೈಲಸಂದ್ರ ದಲ್ಲಿ ಉನ್ನತೀಕರಿಸಲಾಗುತ್ತಿರುವ ಎಸ್‌ಟಿಪಿ ಕಾಮಗಾರಿ ಪರಿಶೀಲಿಸಿ ಅವರು ಮಾತನಾಡಿದರು.

ಮೈಲಸಂದ್ರ ಎಸ್‌ಟಿಪಿ ಕಾಮಗಾರಿ ಪೂರ್ಣಗೊಳಿಸದಿರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿದ ಅವರು, ‘ಡಿಸೆಂಬರ್ ಅಂತ್ಯಕ್ಕೆ ಕಾಮಗಾರಿ ಪೂರ್ಣ ಗೊಳ್ಳಬೇಕು’ ಎಂದರು. ವೃಷಭಾವತಿ ವ್ಯಾಲಿ ಯೋಜನೆಯ ಕಾಮಗಾರಿಯನ್ನು 2026ರ ಮಾರ್ಚ್ ವೇಳೆಗೆ ಪೂರ್ಣ ಗೊಳಿಸುವಂತೆ ನಿರ್ದೇಶಿಸಿದರು.

ಇದೇ ವೇಳೆ ಈ ಎರಡೂ ಸ್ಥಳಗಳಲ್ಲಿ ಅಧ್ಯಕ್ಷರು ಸೇರಿದಂತೆ ಜಲ ಮಂಡಳಿ ಸಿಬ್ಬಂದಿ 350 ಗಿಡಗಳನ್ನು ನೆಟ್ಟರು.

### ಸಾಹಿತ್ಯ ಗ್ರಾಮದಲ್ಲಿ ಆಷಾಢ ಕಾವ್ಯ ಸಂಭ್ರಮ: ಬಿಇಒ ರಮೇಶ್ ನಾಯ್ಕ ಅಭಿಮತ

# ಸೃಜನಶೀಲ ಕಲಿಕೆಗೆ ಕಾವ್ಯ ಸಂಭ್ರಮ ಮಾದರಿ

**ಶಿವಮೊಗ್ಗ:** ‘ಆಷಾಢದ ಕಾವ್ಯ ಸಂಭ್ರಮದಂತಹ ಕಾರ್ಯಕ್ರಮಗಳು ಮಕ್ಕಳಲ್ಲಿ ಸೃಜನಶೀಲತೆ ಹೆಚ್ಚಿಸುತ್ತವೆ’ ಎಂದು ಶಿವಮೊಗ್ಗ ಬಿಇಒ ರಮೇಶ್ ನಾಯ್ಕ ಅಭಿಪ್ರಾಯಪಟ್ಟರು.

ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕವು ಸಾಹಿತ್ಯ ಗ್ರಾಮದಲ್ಲಿ ಈಚೆಗೆ ಏರ್ಪಡಿಸಿದ್ದ ವಿದ್ಯಾರ್ಥಿಗಳಿಗಾಗಿ ವೃಂದಗಾನದಲ್ಲಿ ಕವಿ ಕಾವ್ಯ ನಮನ, ಆಷಾಢದ ಕಾವ್ಯ ಸಂಭ್ರಮ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

‘ಶಾಲೆಗಳ ಸೀಮಿತ ಕಲಿಕೆ ವ್ಯವಸ್ಥೆಯ ಜೊತೆಗೆ ಮತ್ತಷ್ಟು ಕಲಿಕೆಯಲ್ಲಿ ತೊಡಗಲು ಕವಿ, ಕಾವ್ಯ ಪರಿಚಯ ಸಹಕಾರಿ’ ಎಂದು ರಮೇಶ್ ವಿವರಿಸಿದರು. ಕಸಾಪ ವೇದಿಕೆಯು ವರ್ಷವಿಡೀ ಶಿಕ್ಷಕರು, ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಪೂರಕವಾದ, ಉಪಯುಕ್ತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ’ ಎಂದು ಅನನ್ಯ ಶಿಕ್ಷಣ ಸಂಸ್ಥೆಯ ಸ್ಥಾಪಕ ಅನನ್ಯ ಗಿರೀಶ್ ಶ್ಲಾಘಿಸಿದರು. ‘ಮಳೆಗಾಲದ ಈ ದಿನಗಳಲ್ಲಿ ಮನಸ್ಸು ಚಟುವಟಿಕೆಯಿಲ್ಲದೆ ಜಡವಾಗಿರುತ್ತೆ. ನಮ್ಮ ಮಕ್ಕಳಲ್ಲಿರುವ ಪ್ರತಿಭೆ ಪ್ರದರ್ಶಿಸಲು ಇಂತಹ ಕಾರ್ಯಕ್ರಮ ಉತ್ತಮವಾಗಿದೆ’ ಎಂದು ಸನ್ ಸಿಟಿ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಎನ್. ಬಸಪ್ಪ ತಿಳಿಸಿದರು. ಜನಪದ ಗಾಯಕ ಕಡದಕಟ್ಟೆ ತಿಮ್ಮಪ್ಪ ಅವರ ಗಾದೆಗಳನ್ನು ಆಧರಿಸಿದ ‘ಅತ್ತೆಗೊಂದು ಕಾಲ ಸೊಸೆಗೊಂದು ಕಾಲ’ ಮತ್ತು ಒಡಪುಗಳನ್ನು ಒಳಗೊಂಡ ಗಡಿಯಾರ ಎನ್ನುವುದು ಟಿಕ್ ಟಿಕ್ ಎಂಬ ಧ್ವನಿ ಸುರುಳಿ ಬಿಡುಗಡೆ ಮಾಡಲಾಯಿತು.


ಶಿವಮೊಗ್ಗದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮವನ್ನು ಶಿವಮೊಗ್ಗ ಬಿಇಒ ರಮೇಶ್ ನಾಯ್ಕ ಉದ್ಘಾಟಿಸಿದರು

ಕಸಾಪ ಜಿಲ್ಲಾ ಘಟಕದ ಅಧ್ಯಕ್ಷ ಡಿ. ಮಂಜುನಾಥ ಮಾತನಾಡಿದರು. ತಾಲ್ಲೂಕು ಘಟಕದ ಅಧ್ಯಕ್ಷೆ ಮಹಾದೇವಿ, ಶಿಕ್ಷಣ ಸಂಯೋಜಕಿ ಶಶಿರೇಖಾ ಉಪಸ್ಥಿತರಿದ್ದರು.

ದುರ್ಗಿಗುಡಿ, ಮಿಳಘಟ್ಟ, ವಿನೋಬನಗರ ಸರ್ಕಾರಿ ಪ್ರೌಢಶಾಲೆ, ರಾಮಕೃಷ್ಣ ವಿದ್ಯಾನಿಕೇತನ, ಅನನ್ಯ ಪಬ್ಲಿಕ್ ಶಾಲೆ, ಕಸ್ತೂರಬಾ ಬಾಲಿಕಾ, ಆದಿಚುಂಚನಗಿರಿ, ಶಿವಮೊಗ್ಗ ಪಬ್ಲಿಕ್ ಶಾಲೆ, ವಿದ್ಯಾವರ್ಧಕ ಪಬ್ಲಿಕ್ ಸ್ಕೂಲ್, ಸನ್ ಸಿಟಿ ಸ್ಕೂಲ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಶಿರಾದಲ್ಲಿ ಶೀಘ್ರ ಬೆಸ್ಕಾಂ ವಿಭಾಗ ಕಚೇರಿ



ಶಿರಾದ ಜ್ಯೋತಿನಗರದಲ್ಲಿ 17 ಕೋಟಿ ವೆಚ್ಚದ ಎಲ್.ಟಿ.ಎ.ಬಿ ಕೇಬಲ್ ಮತ್ತು ಎಚ್.ಟಿ ಕವರ್ಡ್ ಕಂಡಕ್ಟರ್ ಆಳವಡಿಕೆ ಕಾಮಗಾರಿಗೆ ಶಾಸಕ ಟಿ.ಬಿ.ಜಯಚಂದ್ರ ಶಂಕುಸ್ಥಾಪನೆ ನೆರವೇರಿಸಿದರು.

**ಶಿರಾ:** ಬೆಸ್ಕಾಂ ವಿಭಾಗ (ಡಿವಿಜನ್) ಕಚೇರಿಯನ್ನು ಶೀಘ್ರ ಶಿರಾದಲ್ಲಿ ಪ್ರಾರಂಭಿಸಲಾಗುವುದು ಎಂದು ಶಾಸಕ ಟಿ.ಬಿ.ಜಯಚಂದ್ರ ಹೇಳಿದರು.

ನಗರದ ಜ್ಯೋತಿನಗರದಲ್ಲಿ ಬೆಸ್ಕಾಂನಿಂದ 17 ಕೋಟಿ ವೆಚ್ಚದ ಎಲ್.ಟಿ.ಎ.ಬಿ ಕೇಬಲ್ ಮತ್ತು ಎಚ್.ಟಿ ಕವರ್ಡ್ ಕಂಡಕ್ಟರ್ ಆಳವಡಿಕೆ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದರು. ಇಂಧನ ಸಚಿವ ಕೆ.ಜೆ.ಜಾರ್ಜ್ ಅವರ ಜೊತೆ ಶಿರಾದಲ್ಲಿ ಪ್ರಾದೇಶಿಕ ಕಚೇರಿ ಪ್ರಾರಂಭಿಸಲು ಚರ್ಚೆ ನಡೆಸಿದ್ದು ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಮುಂದಿನ ಸಭೆಯಲ್ಲಿ ತೀರ್ಮಾನ ತೆಗೆದು ಕೊಳ್ಳುವುದಾಗಿ ಹೇಳಿದ್ದಾರೆ ಎಂದರು.

ವಿದ್ಯುತ್ ಅಪಘಾತ, ಸೋರಿಕೆಯನ್ನು ತಪ್ಪಿಸಿ ನಿರಂತರವಾಗಿ ವಿದ್ಯುತ್ ನೀಡುವ ಉದ್ದೇಶದಿಂದ ?85 ಕೋಟಿ ವೆಚ್ಚದಲ್ಲಿ ಎಲ್.ಟಿ.ಎ.ಬಿ ಕೇಬಲ್ ಮತ್ತು ಎಚ್.ಟಿ ಕವರ್ಡ್ ಕಂಡಕ್ಟರ್ ಆಳವಡಿಕೆಗೆ ಅಂದಾಜು ಪಟ್ಟಿ ತಯಾರಿಸಲಾಗಿತ್ತು. ಆದರೆ ತಾಲ್ಲೂಕು ಮಟ್ಟದಲ್ಲಿ ರಾಜ್ಯದಲ್ಲಿ ಪ್ರಥಮ ಬಾರಿಗೆ ಶಿರಾದಲ್ಲಿ ಅನುಷ್ಠಾನ ಮಾಡುತ್ತಿದ್ದು ಹಂತ ಹಂತವಾಗಿ ಕಾಮಗಾರಿ ನಡೆಸಲಾಗುವುದು ಎಂದರು. ತಾಲ್ಲೂಕಿನಲ್ಲಿ ವಿದ್ಯುತ್ ಸಮಸ್ಯೆ ಬಗೆಹರಿಸಲು ಹಲವು ಯೋಜನೆಗಳನ್ನು ರೂಪಿಸಿದ್ದು ಡ್ಯಾಗೇರಹಳ್ಳಿ ಬಳಿ 220 ಕೆ.ವಿ ವಿದ್ಯುತ್ ಸ್ಟೇಷನ್ ಖಾಸಗಿ ಸಹಭಾಗಿತ್ವದಲ್ಲಿ ಕಾಮಗಾರಿ ನಡೆಯುತ್ತಿದೆ. ಕಳ್ಳಂಬೆಳ್ಳ ಭಾಗದಲ್ಲಿ 220 ಕೆ.ವಿ ವಿದ್ಯುತ್ ಸ್ಟೇಷನ್ ಹಾಗೂ ತಾಲ್ಲೂಕಿನ 8 ಕಡೆ ವಿದ್ಯುತ್ ಸಬ್‌ಸ್ಟೇಷನ್ ಪ್ರಾರಂಭಿಸಲಾಗುವುದು ಎಂದರು.

ಬೆಸ್ಕಾಂ ತುಮಕೂರು ವೃತ್ತದ ಅಧೀಕ್ಷಕ ಇಂಜಿನಿಯರ್ ನರಸಿಂಹ ಮೂರ್ತಿ, ಮಧುಗಿರಿ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಜಗದೀಶ್, ನಗರ ಎಇಇ ಶಾಂತರಾಜು, ನಗರಸಭೆ ಪೌರಾಯುಕ್ತ ರುದ್ರೇಶ್, ಅಧ್ಯಕ್ಷ ಜೀಷಾನ್ ಮಹಮೂದ್, ಉಪಾಧ್ಯಕ್ಷ ಲಕ್ಷ್ಮಿಕಾಂತ್, ಸ್ಥಾಯಿ ಸಮಿತಿ ಅಧ್ಯಕ್ಷ ಅಜೇಯ್ ಕುಮಾರ್, ತೇಜು ಭಾನುಪ್ರಕಾಶ್, ಬಿ.ಎಂ.ರಾಧಾಕೃಷ್ಣ ಇದ್ದರು.

# ‘ಭಾಷೆ ಸಂಸ್ಕೃತಿ, ಆತ್ಮಗೌರವದ ಪ್ರತಿಬಿಂಬ’

### ಮೆಚ್ಚುಗೆ ಗಳಿಸಿದ ಕವನಗಳು:

ಕವಿ ಮಂಜುನಾಥ ವಾಚಿಸಿದ ರಸ್ತೆ ಸುರಕ್ಷತೆ ಕುರಿತ ಕವನ, ಉಮಾಪತಿ ಗಂಗಾರಾಮ್ ವಾಚಿಸಿದ ‘ಮಾದರಿಯಾಗು ಓ ನನ್ನ ಅಣ್ಣ’ ಕವನ, ಸಾಗರದ ಪೊಲೀಸ್ ಸಿಬ್ಬಂದಿ ಗೀತಾ ಸಾಗರ್ ವಾಚಿಸಿದ ‘ಪೊಲೀಸ್‌ನವರು ಏನ್ ಮಾಡ್ತಾ ಇದಾರೆ ಸ್ವಾಮಿ’ ಎಂಬ ಸಾರ್ವ ಜನಿಕರ ಅಸಡ್ಡೆಯ ಪ್ರಶ್ನೆಗಳು ಮತ್ತು ಪೊಲೀಸರ ಒತ್ತಡದ ಬಗೆಗಿನ ಕವನ ಕೇಳುಗರ ಮೆಚ್ಚುಗೆ ಗಳಿಸಿತು.



ಶಿವಮೊಗ್ಗದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕವಿ ಮಂಜುನಾಥ ಅವರ ‘ಆಶಾ ಸುಂದರಿ’ ಹಾಗೂ ‘ಕಾವ್ಯ ಮಂಜರಿ’ ಕವನ ಸಂಕಲನಗಳನ್ನು ಗಣ್ಯರು ಬಿಡುಗಡೆಗೊಳಿಸಿದರು.

**ಶಿವಮೊಗ್ಗ:** ‘ಬೇರೆ ಭಾಷೆಗಳಿಂದ ಕನ್ನಡಕ್ಕೆ ಸವಾಲು ಎದುರಾಗುತ್ತಿದ್ದರೂ, ಕನ್ನಡದ ಬಗೆಗಿನ ಅನೇಕ ಕ್ರಿಯಾಶೀಲ ಚಟುವಟಿಕೆಗಳು ಭಾಷೆಯನ್ನು ಮತ್ತಷ್ಟು ಬಲಿಷ್ಠಗೊಳಿಸುತ್ತಿವೆ’ ಎಂದು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಸ್.ರಮೇಶ್ ಕುಮಾರ್ ಅಭಿಪ್ರಾಯಪಟ್ಟರು.

ಕನ್ನಡ ಸಾಹಿತ್ಯ ಸಾಂಸ್ಕೃತಿಕ ವೇದಿಕೆ ಜಿಲ್ಲಾ ಘಟಕದಿಂದ ಇಲ್ಲಿನ ಡಿಎಆರ್ ಪೊಲೀಸ್ ಭವನದಲ್ಲಿ ಆಯೋಜಿಸಿದ್ದ ಸಾಹಿತ್ಯ ಹುಣ್ಣಿಮೆಯ 240ನೇ ತಿಂಗಳ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

‘ಭಾಷಾ ವೈವಿಧ್ಯವನ್ನು ಸಾಮಾನ್ಯ ಜನರಿಗೆ ಪರಿಚಯಿಸುವ ಕಾರ್ಯ ಸಾಹಿತ್ಯ ಹುಣ್ಣಿಮೆಯಿಂದ ನಡೆಯುತ್ತಿದೆ. ಭಾಷೆ ಎಂದರೆ ಕೇವಲ ಸಂವಹನದ ಸಾಧನ ಮಾತ್ರವಲ್ಲ. ಅದು ಒಂದು ಸಮುದಾಯದ ಸಂಸ್ಕೃತಿ, ಪರಂಪರೆ ಮತ್ತು ಆತ್ಮಗೌರವದ ಪ್ರತಿಬಿಂಬ’ ಎಂದು ಹೇಳಿದರು.

‘ಜನರು ಇರುವಲ್ಲಿಗೇ ಹೋಗಿ ಸಾಂಸ್ಕೃತಿಕ ವಾತಾವರಣ ನಿರ್ಮಾಣ ಮಾಡುವ ಉದ್ದೇಶದ ಜತೆಗೆ, ಮಾತೃ ಭಾಷೆಯ ಸವಾಲುಗಳನ್ನು ಚರ್ಚಿಸಲಾಗುತ್ತಿದೆ. ಈ ಕಾರಣದಿಂದಲೇ ಮನೆ? ಮನದ ಕಾರ್ಯಕ್ರಮವಾಗಿ ರೂಪಿಸಿದ ಸಾಹಿತ್ಯ ಹುಣ್ಣಿಮೆ 20 ವರ್ಷಗಳನ್ನು ಪೂರೈಸಿದೆ’ ಎಂದು ಕನ್ನಡ ಸಾಹಿತ್ಯ ಸಾಂಸ್ಕೃತಿಕ ವೇದಿಕೆಯ ಜಿಲ್ಲಾ ಘಟಕದ ಅಧ್ಯಕ್ಷ ಡಿ.ಮಂಜುನಾಥ ತಿಳಿಸಿದರು.

ಕೋಟೆ ಪೊಲೀಸ್ ಠಾಣೆ ಸಿಬ್ಬಂದಿ ರವಿಕುಮಾರ್, ತಿಮ್ಮೇಶಪ್ಪ, ನಾಗಿಬಾಯಿ, ಹರೀಶ್ ಶಿವಮೊಗ್ಗ, ಬಿ.ಬಿ. ಮಂಜುನಾಥ, ಪರಶುರಾಮ, ಎಚ್.ಜಿ.ಸಂತೋಷ, ಸಿ.ಟಿ. ಶರತ್, ಲಕ್ಷ್ಮಣ್, ಜಾಯ್ ಶಿವಮೊಗ್ಗ, ಡಿ.ನಿಂಗೇಶ್, ಕೆ.ಎಂ. ಪ್ರಶಾಂತ ಅವರು ಕವನ ವಾಚಿಸಿದರು.

ಕನ್ನಡ ಸಾಹಿತ್ಯ ಸಾಂಸ್ಕೃತಿಕ ವೇದಿಕೆಯ ಕೋಶಾಧ್ಯಕ್ಷ ಮಧುಸೂದನ್ ಐತಾಳ್, ಕಲಾವಿದ ಉಮೇಶ್ ಗೌಡ, ನಾಗೇಂದ್ರ ಆಚಾರ್ಯ, ಡಿಎಆರ್ ಇನ್‌ಸ್ಪೆಕ್ಟರ್ ಸೋಮಶೇಖರಪ್ಪ, ಮಹಾದೇವಿ, ಕೆ.ಮಂಜಪ್ಪ, ಉಮಾಪತಿ, ರವಿಕುಮಾರ್, ಜಿ.ಲಕ್ಷ್ಮಣ, ಗಾಯಕಿ ನಳಿನಾಕ್ಷಿ, ಸುಶೀಲಾ ಷಣ್ಮುಗಂ ಇದ್ದರು.

ಕವಿ ಮಂಜುನಾಥ ವಾಚಿಸಿದ ರಸ್ತೆ ಸುರಕ್ಷತೆ ಕುರಿತ ಕವನ, ಉಮಾಪತಿ ಗಂಗಾರಾಮ್ ವಾಚಿಸಿದ ‘ಮಾದರಿಯಾಗು ಓ ನನ್ನ ಅಣ್ಣ’ ಕವನ, ಸಾಗರದ ಪೊಲೀಸ್ ಸಿಬ್ಬಂದಿ ಗೀತಾ ಸಾಗರ್ ವಾಚಿಸಿದ ‘ಪೊಲೀಸ್‌ನವರು ಏನ್ ಮಾಡ್ತಾ ಇದಾರೆ ಸ್ವಾಮಿ’ ಎಂಬ ಸಾರ್ವಜನಿಕರ ಅಸಡ್ಡೆಯ ಪ್ರಶ್ನೆಗಳು ಮತ್ತು ಪೊಲೀಸರ ಒತ್ತಡದ ಬಗೆಗಿನ ಕವನ ಕೇಳುಗರ ಮೆಚ್ಚುಗೆ ಗಳಿಸಿತು.

## ಆಟೋಟ ಸ್ಪರ್ಧೆ: ಮೈಮುಲ್ ಅಧ್ಯಕ್ಷ ಆರ್.ಚಲುವರಾಜು ಭರವಸೆ

# ‘ಹಾಲು ಉತ್ಪಾದಕರಿಗೆ ಹೆಚ್ಚಿನ ದರ’



ಮೈಸೂರಿನಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳ ಮುಖ್ಯನಿರ್ವಾಹಕರಿಗೆ ‘ಮೈಮುಲ್’ ಆಯೋಜಿಸಿದ್ದ ಆಟೋಟ ಸ್ಪರ್ಧೆಯಲ್ಲಿ ವಿಜೇತರಿಗೆ ಅಧ್ಯಕ್ಷ ಆರ್.ಚಲುವರಾಜು ಬಹುಮಾನ ನೀಡಿದರು.

### ಹಗ್ಗ–ಜಗ್ಗಾಟ, ರಂಗೋಲಿ ಸ್ಪರ್ಧೆ:

ಹಾಲು ಉತ್ಪಾದಕರಿಗೆ ನಡೆದ ಹಗ್ಗ ಜಗ್ಗಾಟ, ರಂಗೋಲಿ ಸ್ಪರ್ಧೆಗಳಲ್ಲಿ 195 ಮಂದಿ ವಿಜೇತರಿಗೆ ಪದಕ, ಪಾರಿತೋಷಕ ನೀಡಿ ಸನ್ಮಾನಿಸಲಾಯಿತು. ಸ್ಪರ್ಧೆಯಲ್ಲಿ ಹಾಲು ಉತ್ಪಾದಕರ ಸಂಘಗಳ 1,200 ಕಾರ್ಯನಿರ್ವಾಹಕ ಅಧಿಕಾರಿಗಳು ಪಾಲ್ಗೊಂಡಿದ್ದರು. ರಂಗೋಲಿ ಸ್ಪರ್ಧೆಯಲ್ಲಿ ಮೈಸೂರು ತಾಲ್ಲೂಕು ಮೈದನಹಳ್ಳಿಯ ಸುಮಲತಾ ಮೊದಲ ಸ್ಥಾನ ಪಡೆದರೆ, ಎಚ್.ಡಿ.ಕೋಟೆ ತಾಲ್ಲೂಕಿನ ಮುದ್ದಯ್ಯನಹುಂಡಿಯ ರೇಣುಕಾ ಮತ್ತು ಹುಣಸೂರು ತಾಲ್ಲೂಕಿನ ಹಂಚ್ಯಾ ಗ್ರಾಮದ ಕವಿತಾ ಕ್ರಮವಾಗಿ 2ನೇ ಹಾಗೂ 3ನೇ ಸ್ಥಾನ ಪಡೆದರು.

**ಮೈಸೂರು:** ‘ಮೈಮುಲ್‌ನಲ್ಲಿ ನಿತ್ಯ 10 ಲಕ್ಷಕ್ಕೂ ಹೆಚ್ಚು ಲೀಟರ್ ಹಾಲು ಸಂಗ್ರಹ ವಾಗುತ್ತಿದ್ದು, ಹಾಲು ಉತ್ಪಾದಕರಿಗೆ ಹೆಚ್ಚಿನ ದರ ನೀಡಲು ಕ್ರಮವಹಿಸಲಾಗುವುದು’ ಎಂದು ಮೈಮುಲ್ ಅಧ್ಯಕ್ಷ ಆರ್.ಚಲುವರಾಜು ಭರವಸೆ ನೀಡಿದರು.

ಸಿದ್ಧಾರ್ಥನಗರದ ಶಿಕ್ಷಕರ ಭವನದಲ್ಲಿ ಮೈಸೂರು ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟವು (ಮೈಮುಲ್) ಆಯೋಜಿಸಿದ್ದ ಆಟೋಟ ಸ್ಪರ್ಧೆಯಲ್ಲಿ ವಿಜೇತ ತಂಡಗಳಿಗೆ ಬಹುಮಾನ ವಿತರಿಸಿ ಮಾತನಾಡಿದರು. ದಕ್ಷಿಣ ಕನ್ನಡ ಬಿಟ್ಟರೆ ಲೀಟರ್ ಹಾಲಿಗೆ ಅತಿ ಹೆಚ್ಚು ಬೆಲೆಯನ್ನು ಉತ್ಪಾದಕರಿಗೆ ಮೈಮುಲ್ ನೀಡುತ್ತಿದೆ. ರೈತರ ಸಮಸ್ಯೆ ಬಗೆಹರಿಸುವುದೇ ಒಕ್ಕೂಟದ ಗುರಿ’ ಎಂದರು.

‘ಅಗತ್ಯ ವಸ್ತುಗಳ ಬೆಲೆ ಏರಿಕೆ ಆಗಿದೆ. ಪಶು ಆಹಾರ, ಔಷಧ ದರವೂ ಹೆಚ್ಚಾಗಿದೆ. ಹೀಗಾಗಿ ಹೈನುಗಾರಿಕೆಗೆ ಪ್ರೋತ್ಸಾಹ ಸಿಗಬೇಕೆಂದರೆ ಹಾಲಿನ ದರವೂ ಹೆಚ್ಚಾಗಬೇಕಿದೆ’ ಎಂದು ಅಭಿಪ್ರಾಯಪಟ್ಟರು.

‘ರೈತರು ಹೈನುಗಾರಿಕೆಯನ್ನು ಉಪಕಸುಬಾಗಿಯೇ ಪರಿಗಣಿಸಿದ್ದಾರೆ. ಅದು ಮುಖ್ಯ ಕಸಬಾಗಬೇಕೆಂದರೆ ಲಾಭದ ಪಾಲು ಉತ್ಪಾದಕರಿಗೇ ತಲುಪಬೇಕಿದೆ’ ಎಂದು ತಿಳಿಸಿದರು.

‘ಮನೆಗೆ ಹಾಲು ಇರಿಸಿಕೊಳ್ಳದೇ ಒಕ್ಕೂಟಕ್ಕೆ ನೀಡಿದ ಹಲವು ರೈತ ಕುಟುಂಬಗಳಿವೆ. ಅವರೇ ಒಕ್ಕೂಟವನ್ನು ಲಾಭದತ್ತ ಕೊಂಡೊಯ್ದಿದ್ದಾರೆ. ಮೈಮುಲ್ ಕೂಡ ಹಾಲಿನ ಉತ್ಪನ್ನ ಗಳ ಮಾರಾಟದಲ್ಲಿ ಮುಂಚೂಣಿ ಯಲ್ಲಿದೆ. ಮಾರಾಟ ಜಾಲ ವಿಸ್ತರಿಸಲಾಗುವುದು’ ಎಂದು ಹೇಳಿದರು.

ನಿರ್ದೇಶಕ ಬಿ.ಎನ್.ಸದಾನಂದ ಮಾತನಾಡಿ, ‘ಒಕ್ಕೂಟ ಬೆಳೆಯಲು ಹಾಲು ಶೇಖರಣೆಯಷ್ಟೇ ಸಾಲದು. ಹಾಲಿನ ಗುಣಮಟ್ಟದ ಜೊತೆ ನಂದಿನಿ ಉತ್ಪನ್ನಗಳನ್ನೇ ಬಳಸುವಂತೆ ಜನರಲ್ಲಿ ಅರಿವು ಮೂಡಿಸಬೇಕಿದೆ’ ಎಂದರು.

ನಿರ್ದೇಶಕರಾದ ಎ.ಟಿ. ಸೋಮಶೇಖರ್, ಕೆ.ಜಿ.ಮಹೇಶ್, ಕೆ.ಉಮಾಶಂಕರ್, ಸಿ.ಓಂಪ್ರಕಾಶ್, ಪಿ.ಎಂ.ಪ್ರಸನ್ನ, ಕೆ.ಈರೇಗೌಡ, ಕೆ.ಎಸ್.ಕುಮಾರ್, ದ್ರಾಕ್ಷಾಯಿಣಿ ಬಸವರಾಜಪ್ಪ, ಲೀಲಾ ಬಿ.ಕೆ. ನಾಗರಾಜು, ನೀಲಾಂಬಿಕೆ ಮಹೇಶ್, ಶಿವಗಾಮಿ ಷಣ್ಮುಗಂ, ಬಿ.ಗುರುಸ್ವಾಮಿ, ಬಿ.ಎ.ಪ್ರಕಾಶ್, ಎ.ಬಿ.ಮಲ್ಲಿಕಾ, ವ್ಯವಸ್ಥಾಪಕ ನಿರ್ದೇಶಕ ಕೆ.ಎಸ್.ಸುರೇಶ್ ನಾಯ್ಕ್, ಮಾರುಕಟ್ಟೆ ವ್ಯವಸ್ಥಾಪಕರಾದ ಕರಿಬಸವರಾಜು, ಎಚ್.ಕೆ. ಜಯಶಂಕರ್ ಇದ್ದರು.

ಹಾಲು ಉತ್ಪಾದಕರಿಗೆ ನಡೆದ ಹಗ್ಗ ಜಗ್ಗಾಟ, ರಂಗೋಲಿ ಸ್ಪರ್ಧೆಗಳಲ್ಲಿ 195 ಮಂದಿ ವಿಜೇತರಿಗೆ ಪದಕ, ಪಾರಿತೋಷಕ ನೀಡಿ ಸನ್ಮಾನಿಸಲಾಯಿತು. ಸ್ಪರ್ಧೆಯಲ್ಲಿ ಹಾಲು ಉತ್ಪಾದಕರ ಸಂಘಗಳ 1,200 ಕಾರ್ಯನಿರ್ವಾಹಕ ಅಧಿಕಾರಿಗಳು ಪಾಲ್ಗೊಂಡಿದ್ದರು. ರಂಗೋಲಿ ಸ್ಪರ್ಧೆಯಲ್ಲಿ ಮೈಸೂರು ತಾಲ್ಲೂಕು ಮೈದನಹಳ್ಳಿಯ ಸುಮಲತಾ ಮೊದಲ ಸ್ಥಾನ ಪಡೆದರೆ, ಎಚ್.ಡಿ.ಕೋಟೆ ತಾಲ್ಲೂಕಿನ ಮುದ್ದಯ್ಯನಹುಂಡಿಯ ರೇಣುಕಾ ಮತ್ತು ಹುಣಸೂರು ತಾಲ್ಲೂಕಿನ ಹಂಚ್ಯಾ ಗ್ರಾಮದ ಕವಿತಾ ಕ್ರಮವಾಗಿ 2ನೇ ಹಾಗೂ 3ನೇ ಸ್ಥಾನ ಪಡೆದರು.

## ವಿದ್ಯಾರ್ಥಿಗಳ ಪ್ರಗತಿಗೆ ಶ್ರಮಿಸುವ ಶಿಕ್ಷಕರ ಗಮನಿಸಿ ಶಾಲೆಯ ಆಯ್ಕೆ: ಕೇರ್ ಟ್ರಸ್ಟ್

# 25 ಲಕ್ಷ ವೆಚ್ಚದಲ್ಲಿ ಸರ್ಕಾರಿ ಶಾಲೆ ಅಭಿವೃದ್ಧಿ



ಹರಿಹರದ ಗುತ್ತೂರು ಸರ್ಕಾರಿ ಪ್ರೌಢಶಾಲೆ ಅಭಿವೃದ್ಧಿ ಕಾಮಗಾರಿಗೆ ಅನುದಾನ ನೀಡಿದ ದಾನಿಗಳನ್ನು ಸನ್ಮಾನಿಸಲಾಯಿತು.

**ಹರಿಹರ:** ವಿದ್ಯಾರ್ಥಿಗಳ ಪ್ರಗತಿಗೆ ಶ್ರಮಿಸುವ ಶಿಕ್ಷಕರ ಕಳಕಳಿ ಗಮನಿಸಿ ಶಾಲಾ ಕಟ್ಟಡದ ಜೀರ್ಣೋದ್ಧಾರಕ್ಕೆ ನಿರ್ಧರಿಸಲಾಯಿತು ಎಂದು ಬೆಂಗಳೂರಿನ ಕೇರ್ ಟ್ರಸ್ಟ್ ಸೇವಾ ಸಂಸ್ಥೆಯ ಆನಂದ್ ಹೇಳಿದರು.

ಸಮೀಪದ ಗುತ್ತೂರು ಗ್ರಾಮದ ಸರ್ಕಾರಿ ಪ್ರೌಢಶಾಲೆಯ ನವೀಕೃತ ಕಟ್ಟಡದ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಈ ಶಾಲೆಯ ಪ್ರಭಾರ ಮುಖ್ಯಶಿಕ್ಷಕ ಶ್ರೀಧರ್ ಮೈಯ ಹಾಗೂ ಇತರ ಶಿಕ್ಷಕರ ಕಳಕಳಿ ಗಮನಿಸಿ ಈ ಶಾಲೆಯನ್ನು ಆಯ್ಕೆ ಮಾಡಲಾಯಿತು ಎಂದರು. ಬೆಂಗಳೂರಿನ ಪ್ರಗತಿ ಆಟೋಮಶಿನ್ ಪ್ರೈ.ಲಿ. ಹಾಗೂ ಡೈನೆಸ್ಟಿಕ್ ಟೂಲ್ಸ್ ಆ?ಯಂಡ್ ಡಿವೈಸರ್ ಪ್ರೈ.ಲಿ. ಕಂಪನಿಗಳ 25.22 ಲಕ್ಷ ಸಿಎಸ್‌ಆರ್ ಅನುದಾನದಲ್ಲಿ ಕೇರ್ ಟ್ರಸ್ಟ್ ಸೇವಾ ಸಂಸ್ಥೆ ಮಾಡಿರುವ ಅಭಿವೃದ್ಧಿ ಕೆಲಸಗಳಿಂದಾಗಿ ಈ ಶಾಲೆಯು ಖಾಸಗಿ ಶಾಲೆಗಿಂತ ಹೆಚ್ಚು ಆಕರ್ಷಕವಾಗಿದೆ ಎಂದು ಸಾಮಾಜಿಕ ಕಾರ್ಯಕರ್ತ ಐರಣಿ ಹನುಮಂತಪ್ಪ ಹೇಳಿದರು.

ದೊಡ್ಡ ಮೊತ್ತದ ಅನುದಾನದಲ್ಲಿ ಶಾಲೆಯಲ್ಲಿ ಉತ್ತಮ ಸೌಕರ್ಯ ಕಲ್ಪಿಸಲಾಗಿದೆ. ಈ ಸೌಲಭ್ಯಗಳನ್ನು ಉಳಿಸಿಕೊಂಡು ಹೋಗುವ ಜವಾಬ್ದಾರಿ ಶಾಲೆಯವರ ಮೇಲಿದೆ ಎಂದು ನಿವೃತ್ತ ನ್ಯಾಯಾಧೀಶ, ಜಿಲ್ಲಾಧಿಕಾರಿ ಕಚೇರಿಯ ಕಾನೂನು ಸಲಹೆಗಾರ ಹಾಲಪ್ಪ ತಿಳಿಸಿದರು.

ಇಟ್ಟಿಗೆ ಭಟ್ಟಿ ಪ್ರದೇಶದ ಕೂಲಿಕಾರರ ಮಕ್ಕಳೇ ಹೆಚ್ಚಿರುವ ಈ ಶಾಲೆಯನ್ನು ಅಭಿವೃದ್ಧಿಗೊಳಿಸಿರುವುದು ಸೂಕ್ತವಾಗಿದೆ. ಮುಂದೆ ಹೈಟೆಕ್ ಪ್ರಯೋಗಶಾಲೆಯನ್ನೂ ಒದಗಿಸುವ ಭರವಸೆ ಸಂಸ್ಥೆಯವರಿಂದ ಬಂದಿರುವುದು ಶ್ಲಾಘನೀಯ ಎಂದು ತಪೋವನ ಸಂಸ್ಥೆಯ ಮುಖ್ಯಸ್ಥ ಶಶಿಕುಮಾರ್ ಮೆರ?ವಾಡೆ ಹೇಳಿದರು.

ದಾನಿಗಳಾದ ಬೆಂಗಳೂರಿನ ಅತುಲ್ ಭಿರಂಗಿ, ದಾಮೋದರ್ ಬಿ. ಅವರು ಹೈಟೆಕ್ ಶೌಚಾಲಯದ ಗೋಡೆಗೆ ಬಣ್ಣ ಬಳಿಯುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು.

ದಾನಿಗಳಾದ ಬೆಂಗಳೂರಿನ ಅತುಲ್ ಭಿರಂಗಿ, ದಾಮೋದರ್ ಬಿ., ಹೇಮಂತ್ ಕೆ.ವಿ., ತಿಮ್ಮಯ್ಯ ಬಿ.ಡಿ., ದಿನೇಶ್ ಎಸ್.ಎಸ್, ದೀಪಕ್ ಜೋಗಳೇಕರ್, ಗುರುರಾಜ್, ಅಶ್ವನಿ ಕುಮಾರ್, ಕಿಶೋರ್ ಚೆನ್ನಪ್ಪ, ಗುರುರಾಜ ಮುಗುಳಕೋಡ, ಪ್ರಸನ್ನಕುಮಾರ್, ಸಂತೋಷ್‌ಕುಮಾರ್ ಪಿ.ಆರ್., ಶಾಂತಕುಮಾರ್ ಜಿ.ಪಿ., ಸತೀಶ್ ಬಿ.ಡಿ. ಅವರನ್ನು ಸತ್ಕರಿಸಲಾಯಿತು.

# ಹೊಳೆವ ಮುಖದ ಬಣ್ಣದ ಪ್ರಶ್ನೆ

**ಚಿದಾನಂದ ಸಾಲಿ**/ ಗಡಿಯಾರ ಬಿಟ್ಟು ಬೇರೇನೂ ಆಭರಣ ಧರಿಸದ, ಮುಖಕ್ಕೆ ಕನಿಷ್ಠ ಪೌಡರ್ ಅನ್ನೂ ಹಾಕಿಕೊಳ್ಳದ ಕೇರಳದ ಮಲಪ್ಪುರಂ ಜಿಲ್ಲೆಯ ಜಿಲ್ಲಾಧಿಕಾರಿಣಿ ರಾಣಿ ಸೋಯಾಮೋಯಿ ಅವರು ಯಾಕೆ ತಾವು ಮೇಕಪ್ ಹಾಕಿಕೊಳ್ಳುವುದಿಲ್ಲ ಎಂದು ವಿವರಿಸಿದ ಸಂದರ್ಶನದ ತುಣುಕೊಂದು ಇತ್ತೀಚೆಗೆ ವೈರಲ್ ಆಗಿತ್ತು. ಅವರದಕ್ಕೆ ನೀಡಿದ ವಿವರಣೆ ಹೀಗಿತ್ತು:

ಜಾರ್ಖಂಡ್ ರಾಜ್ಯದ ಕೋಡರ್ಮಾ ಜಿಲ್ಲೆಯ ಗುಡ್ಡಗಾಡು ಪ್ರದೇಶದಲ್ಲಿನ ‘ಮೈಕಾ’ ಗಣಿನಿಬಿಡ ಪ್ರದೇಶದ ಗುಡಿಸಲೊಂದರಲ್ಲಿ ಹುಟ್ಟಿದ ಅವರಿಗೆ ತಂದೆ, ತಾಯಿ, ಇಬ್ಬರು ಅಣ್ಣಂದಿರು ಮತ್ತು ಒಬ್ಬ ತಂಗಿಯಿದ್ದರು. ಅಲ್ಲಿ ಶಾಲೆ, ಆಸ್ಪತ್ರೆ, ಶೌಚಾಲಯ, ಕರೆಂಟ್ ಮುಂತಾದ ಯಾವ ಸೌಲಭ್ಯಗಳೂ ಇರಲಿಲ್ಲ. ಹೆಂಗಸರು ಮೈಕಾ ಗಣಿಗಳಲ್ಲಿ ರಾಶಿಯಾಗಿ ಬಿದ್ದಿರುವ ಮಣ್ಣಿನ ಗುಡ್ಡೆಯನ್ನು ಬರಿಗೈಯಿಂದ ಬೆದಕಿ, ಬೆದಕಿ ಮೈಕಾದ ಅದಿರನ್ನು ತೆಗೆದರೆ; ಗಂಡಸರು ಇಕ್ಕಟ್ಟಾದ ಸುರಂಗಗಳೊಳಗೆ ಹೋಗಿ ಹಾರೆ–ಸುತ್ತಿಗೆಯಿಂದ ಗೋಡೆ ಒಡೆದು ಅದಿರು ತರುತ್ತಿದ್ದರು. ತೀವ್ರ ಅನಾರೋಗ್ಯ ಮತ್ತು ಹಸಿವಿನಿಂದ ಸೋದರರು ತೀರಿಕೊಂಡ ಮೇಲೆ ಆರು ವರ್ಷದ ರಾಣಿ ಮತ್ತವರ ತಂಗಿ ಕೂಡ ಅನಿವಾರ್ಯವಾಗಿ ಆಳ ಸುರಂಗದ ಕೊರಕಲುಗಳಲ್ಲಿ ವಿಷಪೂರಿತ ದೂಳು ಕುಡಿಯುತ್ತ ಅದಿರು ಸಂಗ್ರಹಿಸಲು ಹೊರಡಬೇಕಾಯಿತು.

ಹೀಗೊಮ್ಮೆ ವಿಪರೀತ ಜ್ವರದ ಕಾರಣವಾಗಿ ರಾಣಿಯವರು ಗಣಿಗೆ ಹೋಗದ ದಿನ, ಗಣಿ ಕುಸಿತದಿಂದಾಗಿ ಅಪ್ಪ, ಅಮ್ಮ, ತಂಗಿ ಮೂವರೂ ಜೀವಂತ ಸಮಾಧಿಯಾದರು. ಅಂಥಾ ರಾಣಿ ಅವರು ಸರ್ಕಾರಿ ಅನಾಥಾಶ್ರಮಕ್ಕೆ ಸೇರಿ, ಓದಿಕೊಂಡು ಈಗ ಜಿಲ್ಲಾಧಿಕಾರಿಯಾಗಿದ್ದಾರೆ.

‘ಸುರಂಗಗಳಲ್ಲಿ ಸಿಲುಕಿದ ಶಿಶು ಕನಸುಗಳು ಮತ್ತು ಛಿದ್ರವಾದ ಬಡವರ ಬದುಕುಗಳು– ನಮ್ಮ ಕೆನ್ನೆಗೆ, ಚರ್ಮಕ್ಕೆ ಬಣ್ಣ ತುಂಬುತ್ತಿವೆ ಎಂದು ನನಗರಿವಾದ ದಿನವೇ ನಾನು ಈ ಪ್ರಸಾಧನಗಳಿಂದ ದೂರ ಸರಿದೆ’ ಎನ್ನುವ ರಾಣಿ ಸೋಯಾಮೋಯಿ ಅವರು ಎತ್ತಿರುವ ಪ್ರಶ್ನೆ ಬದುಕಿನದ್ದಕ್ಕಿಂತ ಮುಖ್ಯವಾಗಿ ಬಣ್ಣದ್ದು ಅಂತ ನನಗೆ ತೀವ್ರವಾಗಿ ಅನಿಸಿತು.

ಆಮೇಲೆ ಫ್ಯಾಕ್ಟ್ ಚೆಕ್ ಮಾಡಿದಾಗ ತಿಳಿದ ವಿಷಯವೆಂದರೆ ಅಸಲಿಗೆ ಮಲಪ್ಪುರಂ ಜಿಲ್ಲೆಯಲ್ಲಿ ರಾಣಿ ಸೋಯಾಮೋಯಿ ಎಂಬ ಜಿಲ್ಲಾಧಿಕಾರಿಣಿಯೇ ಆಗಿಹೋಗಿಲ್ಲ ಎಂಬುದು. ಇಲ್ಲಿಯೇ ಇರೋದು ಮಜಾ. ವಾಸ್ತವದಲ್ಲಿ ಈ ವಿಡಿಯೊದಲ್ಲಿದ್ದದ್ದು ಶೈನಾಮೋಳ್ ಎಂಬ ಜಿಲ್ಲಾಧಿಕಾರಿಣಿ. ಇನ್ನು ರಾಣಿ ಸೋಯಾಮೋಯಿ ಎಂಬುದು ಮಲಯಾಳಂ ಕಥೆಗಾರ ಹಕೀಮ್ ಮೊರಯೂರ್ ಅವರ ‘ಮೂರು ಪೆಣ್ಣುಗಳ್’ ಎಂಬ ಕಥಾಸಂಕಲನದಲ್ಲಿರುವ ‘ಶೈನಿಂಗ್ ಫೇಸಸ್’ ಎಂಬ ಕಥೆಯಲ್ಲಿರುವ ಒಂದು ಕಲ್ಪಿತ ಪಾತ್ರ. ಹೀಗೆ ಕಲ್ಪಿತ ಪಾತ್ರವೊಂದು ನಿಜಜೀವನದ ವ್ಯಕ್ತಿಯಾಗಿ ಬಿಂಬಿತವಾಗುವುದರ ಹಿಂದೆ ಇರುವುದು ಮಾತ್ರ ತನ್ನ ಮೈಕಪ್ಪಿನ ಕೀಳರಿಮೆಯನ್ನು ಸಾಧನೆಯ ಬಲದಿಂದ ಮೆಟ್ಟಿ ನಿಲ್ಲಬೇಕೆಂಬ ತಹತಹಿಕೆಯ ಲಕ್ಷಾಂತರ ಜನರಿಂದ ರೂಪಿತವಾದ ಒಂದು ಸಾಮಾಜಿಕ ನಿರೀಕ್ಷೆಯೇ ಹೊರತು ಬೇರೇನಲ್ಲ. ಈಗ ಈ ನಿಜವಾದ ವ್ಯಕ್ತಿಯಾಗಿ ಬದಲಾದ ಕಲ್ಪಿತ ಪಾತ್ರದ ಕಥೆಯ ಇತರೆ ಮಗ್ಗುಲುಗಳತ್ತ ಕಣ್ಣು ಹಾಯಿಸೋಣ. ‘ಹೊಳೆವ ಖನಿಜ’ ‘ವಿವಾದಿತ ಖನಿಜ’ ಎಂದು ಕರೆಯಲ್ಪಡುವ ‘ಮೈಕಾ’ವನ್ನು ಮುಖ್ಯವಾಗಿ ಫೇಸ್ ಪೌಡರ್, ಐ ಶಾಡೋ, ನೇಲ್ ಪಾಲಿಶ್, ಲಿಪ್‌ಸ್ಟಿಕ್ ಮೊದಲಾದ ಪ್ರಸಾಧನ ಸಾಮಗ್ರಿಗಳ ತಯಾರಿಯಲ್ಲಿ ಬಳಸಲಾಗುತ್ತದೆ. ಮೈಕಾ ನಿಕ್ಷೇಪವು ಪ್ರಪಂಚದಲ್ಲೇ ಅತಿ ಹೆಚ್ಚು ಇರುವುದು ಭಾರತದಲ್ಲಿ. 1980ರವರೆಗೆ 700 ಗಣಿಗಳು, 20 ಸಾವಿರ ಕಾರ್ಮಿಕರಿಂದ ಪ್ರಪಂಚದ ಅತಿ ಹೆಚ್ಚು ಮೈಕಾ ಉತ್ಪಾದಕ ರಾಷ್ಟ್ರವಾಗಿತ್ತು ಭಾರತ. ಆನಂತರ ಹೊಸ ಲೀಸ್‌ಗಳನ್ನು ಮಂಜೂರು ಮಾಡುವುದನ್ನು ನಿಲ್ಲಿಸಿ, ನೂತನ ಅರಣ್ಯ ಸಂರಕ್ಷಣಾ ಕಾಯ್ದೆ ಮೂಲಕ ಬಿಗಿ ಕಾನೂನು ಕ್ರಮಗಳನ್ನು ಜಾರಿಗೆ ತಂದ ಪರಿಣಾಮವಾಗಿ 2000ನೇ ಇಸವಿ ಹೊತ್ತಿಗೆ ಜಾರ್ಖಂಡಿನ ನೂರಾರು ಗಣಿಗಳು ಸ್ಥಗಿತಗೊಂಡು, ಸಾವಿರಾರು ಕಾರ್ಮಿಕರು ಬೀದಿಪಾಲಾದರು. ಹಾಗೆ ಸ್ಥಗಿತವಾದ ಈ ಗಣಿಗಳನ್ನು ಪಡೆದುಕೊಂಡ ಸ್ಥಳೀಯರು ಕಾನೂನುವಿರೋಧಿಯಾಗಿ ಗಣಿಗಾರಿಕೆ ಆರಂಭಿಸಿದರು. ಯಾರು ತುಸು ತಪ್ಪು ಮಾಡಿದರೂ, ಎಲ್ಲರೂ ಜೀವಸಮಾಧಿಯಾಗಬಹುದಾದ ಈ ಸುರಂಗಗಳೇ ಅಲ್ಲಿನ ಬಡಜನರ ಪಾಲಿನ ಅನ್ನದ ಬಟ್ಟಲುಗಳಾಗಿವೆ. ಈ ಗಣಿಗಾರಿಕೆಯೇ ಕಾನೂನುವಿರೋಧಿಯಾದ್ದರಿಂದ ಇಲ್ಲಿ ಘಟಿಸುವ ಸಾವುಗಳಿಗೆ ಪರಿಹಾರವೂ ಸಿಗುವುದಿಲ್ಲ. ಹೀಗೆ ತೆಗೆದ ಅದಿರಿನ ಪ್ರತಿ ಕೆ.ಜಿ.ಗೆ ? 7ರಂತೆ ಒಬ್ಬರಿಗೆ ದಿನಕ್ಕೆ ಗರಿಷ್ಠ ಸಿಗುವುದು ನೂರರಿಂದ ನೂರೈವತ್ತು ರೂಪಾಯಿ ಮಾತ್ರ. ಇವತ್ತಿಗೂ ಅಲ್ಲಿ ಪ್ರತಿ ತಿಂಗಳು 40ರಿಂದ 50 ಹೊಸ ಕ್ಷಯರೋಗದ ಕೇಸುಗಳು, 15?20 ಸಾವುಗಳು ಮತ್ತು ಲೆಕ್ಕವಿಲ್ಲದಷ್ಟು ರಕ್ತಹೀನತೆಯ ಪ್ರಕರಣಗಳು ವರದಿಯಾಗುತ್ತವೆ. ಜೀವಹಾನಿಯೇ ಈ ಮಟ್ಟದಲ್ಲಿರುವಾಗ ಗಣಿ ವಿಸ್ತರಣೆಗಾಗಿ ನಡೆಯುವ ಅಪಾರ ಪ್ರಮಾಣದ ಅರಣ್ಯನಾಶ, ಅಪರೂಪದ ವನ್ಯಜೀವಿಗಳ ಅಳಿವು ಮತ್ತು ಶಾಲೆಯಿಂದ ಹೊರಗುಳಿದ ಸಾವಿರಗಟ್ಟಲೆ ಬಾಲಕಾರ್ಮಿಕರ ಬಗ್ಗೆ ಹೇಳುವಂತೆಯೇ ಇಲ್ಲ. ಬಿಳಿಬಣ್ಣದ ಮೋಹದ ಸಂಕೇತವಾಗಿ ನಮ್ಮ ಮುಖಗಳ ಮೇಲೆ ಮೆತ್ತಿಕೊಂಡಿರುವ ಪ್ರಸಾಧನ ಸಾಮಗ್ರಿಗಳ ಹಿಂದೆ ಇಂಥ ಕರುಣಾರ್ದ್ರವಾದ ಭೀಕರ ವಾಸ್ತವವಿದೆ ಎಂಬುದು ಬಹುಜನರಿಗೆ ತಿಳಿದಿಲ್ಲ.

ಇಂದು ಪ್ರಸಾಧನ ಸಾಮಗ್ರಿಗಳ ವ್ಯವಹಾರವು ಮಿಲಿಯನ್ ಡಾಲರ್‌ಗಳ ಗಡಿ ದಾಟಿದೆ. ಹಾಗೆ ನೋಡಿದರೆ ವಿಕಾಸವಾದದ ಪ್ರಕಾರ ಮಿಲಿಯಾಂತರ ವರ್ಷಗಳ ಹಿಂದೆ ಈ ಭೂಮಿ ಮೇಲೆ ಮೊದಲ ಮಾನವ ಕಾಣಿಸಿಕೊಂಡಿದ್ದೇ ಆಫ್ರಿಕಾದಲ್ಲಿ. ಬ್ರಿಟಿಷರು ತಮ್ಮ ವಸಾಹತುಗಳನ್ನು ಜಗತ್ತಿನಾದ್ಯಂತ ಸ್ಥಾಪಿಸಿಕೊಂಡ ಮೇಲೆ ‘ಆಳುವವರ ಬಣ್ಣವೇ ಶ್ರೇಷ್ಠವೆಂಬ ಬಲವಂತದ ಹೇರಿಕೆಯಲ್ಲಿ ಮತ್ತು ಅನಿವಾರ್ಯ ಒಪ್ಪಿಗೆಯಲ್ಲಿ’ ಬಿಳಿಗೆ ಮಹತ್ವ ಬಂತು. ಹಾಗೆ ಸೌಂದರ್ಯ ನಿರ್ಧಾರಕ್ಕೆ ಒಂದು ಅಪಮಾರ್ಗ ಹಾಕಿಕೊಟ್ಟ ರಾಜಕಾರಣವು ಕಾಲಾನುಕ್ರಮದಲ್ಲಿ ಅದುವೇ ಸರಿಯಾದುದೆಂದು ಬಿಂಬಿಸಿ, ನಂಬಿಸಿ ಜಗತ್ತಿನ ಸೌಂದರ್ಯಕಲ್ಪನೆಯನ್ನೇ ಬುಡಮೇಲಾಗಿಸಿಬಿಟ್ಟಿತು. ಭಾರತದಂಥ ವಸಾಹತಿನಲ್ಲಿಯಂತೂ ಲಾಗಾಯ್ತಿನಿಂದ ಇದ್ದ ಜಾತಿಪದ್ಧತಿಯ ಮೇಲರಿಮೆಯೂ ಸೇರಿಕೊಂಡು ಗೌರವರ್ಣಕ್ಕೆ ಇನ್ನಿಲ್ಲದ ಪ್ರಾಶಸ್ತ್ಯ ಮತ್ತು ಪ್ರತಿಷ್ಠೆ ದೊರಕಿಬಿಟ್ಟಿತು. ಹಾಗೆ ಮನಸ್ಸಿಗೆ ಹೇಗೆ ನೋಡಬೇಕೆಂದು ಕಲಿಸಲಾಯಿತೋ, ಆ ದೃಷ್ಟಿಕೋನದಿಂದಲೇ ಕಣ್ಣುಗಳು ಬಣ್ಣವನ್ನು ನೋಡತೊಡಗಿ ಕಪ್ಪು ಕೀಳಾಯಿತು. ಮೇಕಪ್ಪು ಮೇಲಾಯಿತು. ಮೈಬಣ್ಣ ಸಹಜ, ಮೇಕಪ್ಪು ಕೃತಕ ಎಂಬುದನ್ನು ಮರೆತ ಅರ್ಥಹೀನ ಹುಸಿ ಮೇಲರಿಮೆಯ ವರ್ಣಬೇಧ ನೀತಿಯಿಂದಾಗಿ ಇಡೀ ಪ್ರಪಂಚ ಕೀಳ್ತನದ ಭಾರದಲ್ಲಿ ನಲುಗುವಂತಾಯಿತು.

21ನೇ ಶತಮಾನದ ಆಧುನಿಕ ಕಾಲದಲ್ಲೂ ಕಪ್ಪೆಂಬ ಕಾರಣಕ್ಕೆ ಜಾರ್ಜ್ ಫ್ಲಾಯ್ಡ್ ಹಾಡಹಗಲೇ ನಡುರಸ್ತೆಯಲ್ಲಿ ಅದೂ ಪ್ರಭುತ್ವ ಪ್ರತಿನಿಧಿಯಿಂದಲೇ ಕೊಲೆಯಾದರು. ಸ್ತ್ರೀಯರ ಕಥೆಯಂತೂ ಇನ್ನೂ ಗಂಭೀರವಾಗಿದೆ. ಇದರ ಬಗ್ಗೆ 1960ರಲ್ಲೇ ರಾಮಮನೋಹರ ಲೋಹಿಯಾ ಅವರು ‘ಸೌಂದರ್ಯ ಮತ್ತು ಮೈಬಣ್ಣ’ (ಅನು: ಕೆ.ವಿ.ಸುಬ್ಬಣ್ಣ) ಎಂಬ ವಿಚಾರಪ್ರಚೋದಕ ಲೇಖನ ಬರೆದರು. ತಮ್ಮ ಕಾಲಕ್ಕಿಂತ ಮುಂದೆ ನಿಂತು ಯೋಚಿಸಬಲ್ಲವರಾಗಿದ್ದ ಲೋಹಿಯಾರವರು ಅದೇ ಲೇಖನದಲ್ಲಿ ಮುಂದುವರಿದು ‘ಕಪ್ಪು–ಬಿಳಿಗಳ ನಡುವೆ ಬಡತನ–ಶ್ರೀಮಂತಿಕೆಗಳ ನಡುವಿರುವಂತೆ ಅಸಂಖ್ಯಾತ ಮೆಟ್ಟಿಲುಗಳಿವೆ. ಕಡುಗಪ್ಪಿನಿಂದ ಶುರುವಾಗಿ ಕಡುಕಂದು, ಕಂದು, ಕೌಲು, ಎಣ್ಣೆಗೆಂಪು, ಗೋಧಿಗೆಂಪು, ತಿಳಿಹಳದಿ, ಗೌರವರ್ಣ, ಅಚ್ಚ ಬಿಳುಪುಗಳವರೆಗೆ ಈ ವ್ಯಾಪ್ತಿ ಹರಡಿದೆ. ಪ್ರತಿ ಮೆಟ್ಟಿಲೂ ತನ್ನನ್ನು ಮೇಲಿನವನಿಗೆ ಹತ್ತಿರವೆಂದು ಭಾವಿಸಿಕೊಂಡು ಇಲ್ಲದ ಮೇಲರಿಮೆಯಲ್ಲಿ ಮೆರೆಯಲು ತವಕಿಸುತ್ತದೆ. ಮೈಬಣ್ಣ ಮತ್ತು ಸೌಂದರ್ಯ ಅಂತರಗಳನ್ನು ಗುರುತಿಸುವಲ್ಲಿ ರಸಪ್ರಜ್ಞೆಯು ಒಂದು ಹೊಸಕ್ರಾಂತಿಯೇ ನಡೆಯಬೇಕು’ ಎಂದು ಕರೆ ನೀಡಿದ್ದು ಇಂದಿಗೂ ಹೊಂದುವಂತಿದೆ.

# ‘2032ಕ್ಕೆ ಕರ್ನಾಟಕದ್ದು ಟ್ರಿಲಿಯನ್ ಡಾಲರ್ ಆರ್ಥಿಕತೆ’



ಶಿವಮೊಗ್ಗದಲ್ಲಿ ಶಾಂತಲಾ ಸಮೂಹದಿಂದ ನಡೆದ ಚರ್ಚೆಯಲ್ಲಿ ಹೂಡಿಕೆ ತಜ್ಞ ಉಲ್ಲಾಸ್ ಕಾಮತ್ ಮಾತನಾಡಿದರು.

**2ನೇ ತಲೆಮಾರಿಗೆ ಉದ್ಯಮ ಮುನ್ನಡೆಸುವ ಹೊಣೆ:**
ಶಾಂತಲಾ ಸಮೂಹ ಸಂಸ್ಥೆ ಐದು ದೊಡ್ಡ ಫೌಂಡ್ರಿಗಳು ಸೇರಿದಂತೆ 10 ಕಂಪನಿಗಳ ಹೊಂದಿದ್ದು, ಒಟ್ಟು 40 ಕುಟುಂಬಗಳ ಒಳಗೊಂಡಿದೆ. ಇದರಲ್ಲಿ ಕೆಲವರು ಹೂಡಿಕೆ ಮಾಡಿದ್ದು, ಇನ್ನೂ ಕೆಲವರು ನಿರ್ವಹಣೆಯಲ್ಲಿ ಕೈಜೋಡಿಸಿದ್ದಾರೆ ಎಂದು ವಿಧಾನಪರಿಷತ್ ಮಾಜಿ ಸದಸ್ಯ ಎಸ್.ರುದ್ರೇಗೌಡ ಹೇಳಿದರು. 40 ವರ್ಷಗಳ ಹಳೆಯ ಈ ಸಂಸ್ಥೆ ಕಳೆದ ವರ್ಷ 450 ಕೋಟಿ ವಹಿವಾಟು ನಡೆಸಿದೆ. 1 ಸಾವಿರ ಕೋಟಿ ವಹಿವಾಟು ನಡೆಸುವ ಗುರಿಯೊಂದಿಗೆ ಎರಡನೇ ತಲೆಮಾರಿನ ನಿರ್ವಹಣೆಯೊಂದಿಗೆ ಮುನ್ನಡೆಯುವ ಉದ್ದೇಶ ಹೊಂದಿದೆ ಎಂದರು.

**ಶಿವಮೊಗ್ಗ:** ‘ಮೇಕ್ ಇನ್ ಇಂಡಿಯಾ, ಚೈನಾ ಪ್ಲಸ್ ಒನ್ ಪಾಲಿಸಿ ಸೇರಿದಂತೆ ಉದ್ಯಮ ವಲಯದಲ್ಲಿನ ಅಗಾಧ ಅವಕಾಶಗಳ ಪರಿಣಾಮ 2032ರ ವೇಳೆಗೆ ಕರ್ನಾಟಕ ಸೇರಿದಂತೆ ದೇಶದ ಆರು ರಾಜ್ಯಗಳು (ಮಹಾರಾಷ್ಟ್ರ, ಗುಜರಾತ್, ಆಂಧ್ರ ತೆಲಂಗಾಣ, ತಮಿಳುನಾಡು, ಉತ್ತರಪ್ರದೇಶ) ಒಂದು ಟ್ರಿಲಿಯನ್ ಡಾಲರ್ (87 ಲಕ್ಷ ಕೋಟಿ) ಆರ್ಥಿಕತೆ ಹೊಂದಲಿವೆ’ ಎಂದು ಹೂಡಿಕೆ ತಜ್ಞ ಕೆ.ಉಲ್ಲಾಸ್ ಕಾಮತ್ ಹೇಳಿದರು.

ಇಲ್ಲಿನ ಶಾಂತಲಾ ಸಮೂಹ ಸಂಸ್ಥೆಯಿಂದ ಬುಧವಾರ ಮಲ್ನಾಡ್ ಶೈರ್‌ನಲ್ಲಿ ಆಯೋಜಿಸಿದ್ದ ‘ಕುಟುಂಬ ನಿರ್ವಹಣೆಯ ಉದ್ಯಮಗಳ ಬೆಳವಣಿಗೆ ಹಾಗೂ ಅವಕಾಶಗಳು’ ಕುರಿತ ಚರ್ಚೆಯಲ್ಲಿ ಮಾತನಾಡಿದ ಅವರು, ‘ಈ ಆರು ರಾಜ್ಯಗಳೊಂದಿಗೆ ಆ ವೇಳೆಗೆ ಜಾಗತಿಕವಾಗಿ 19 ದೇಶಗಳು ಮಾತ್ರ ಒಂದು ಟ್ರಿಲಿಯನ್ ಡಾಲರ್ ಆರ್ಥಿಕತೆ ಹೊಂದಲಿವೆ’ ಎಂಬುದು ಗಮನಾರ್ಹ ಸಂಗತಿ ಎಂದರು.

‘ಚೈನಾ ಪ್ಲಸ್ ಒನ್ ಅಡಿ ಅಲ್ಲಿಂದ ಆಮದು ಮಾಡಿಕೊಳ್ಳುವ ವಸ್ತುಗಳನ್ನು ಇಲ್ಲಿಯೇ ಉತ್ಪಾದಿಸುವ ಹಾಗೂ ಚೈನಾ ಎಲ್ಲೆಲ್ಲಿಗೆ ರಫ್ತು ಮಾಡುತ್ತದೆಯೋ ಅಲ್ಲಿಗೆ ಅದೇ ಉತ್ಪನ್ನಗಳನ್ನು ರಫ್ತು ಮಾಡುವ ಆಶಯ ಹೊಂದಲಾಗಿದೆ. ಹೀಗಾಗಿ ಉದ್ಯಮ ವಲಯದಲ್ಲಿ ಅವಕಾಶಗಳು ಮುಕ್ತವಾಗಿವೆ. ದೇಶದ ಜಿಡಿಪಿ ಬೆಳವಣಿಗೆಯಲ್ಲಿ ಶೇ 19ರಷ್ಟಿರುವ ಉದ್ಯಮಗಳ ಪಾಲನ್ನು 2032ಕ್ಕೆ ಶೇ 25ಕ್ಕೆ ಹೆಚ್ಚಿಸುವ ಗುರಿ ಹೊಂದಲಾಗಿದೆ. ಹೀಗಾಗಿ ಕುಟುಂಬ ನಿರ್ವಹಣೆಯ ಉದ್ಯಮಗಳಿಗೂ ಬೆಳವಣಿಗೆಗೆ ಹೆಚ್ಚು ಅವಕಾಶವಿದೆ’ ಎಂದು ತಿಳಿಸಿದರು.

ವಿಶ್ವದ 500 ಕುಟುಂಬಗಳ ಒಟ್ಟು ಆಸ್ತಿ ಮೌಲ್ಯ ಎಂಟು ಟ್ರಿಲಿಯನ್ ಡಾಲರ್ ಇದೆ. ಅದು ಭಾರತದ ಜಿಡಿಪಿಯ ದುಪ್ಪಟ್ಟು ಮೌಲ್ಯ. ಉತ್ತರಾಧಿಕಾರಿ ಇಲ್ಲದಿರುವುದು, ತಲೆಮಾರುಗಳ ನಡುವಿನ ಭಿನ್ನ ಆಲೋಚನೆಗಳ ಪರಿಣಾಮ ಕುಟುಂಬಗಳ ಒಡೆತನದ ಉದ್ಯಮಗಳಲ್ಲಿ ಶೇ 70ರಷ್ಟು ಒಂದೇ ಪೀಳಿಗೆಗೆ ಮುಕ್ತಾಯವಾಗುತ್ತಿವೆ. ಶೇ 30ರಷ್ಟು ಮಾತ್ರ ವಿಸ್ತರಣೆ ಹಾಗೂ ಲಾಭಾಂಶ ಪ್ರಮಾಣದಲ್ಲಿ ಏರಿಕೆ ಕಂಡು ಮುಂದುವರೆಯುತ್ತಿವೆ. ಮೂರನೇ ತಲೆಮಾರಿಗೆ ಆ ಪ್ರಮಾಣ ಶೇ 3ಕ್ಕೆ ಇಳಿಯುತ್ತಿದೆ ಎಂದರು.

‘ಪ್ರತೀ ಪೀಳಿಗೆಗೂ ಯೋಚನೆಗಳು ಬದಲಾಗುತ್ತವೆ. ಹಿಂದಿನವರು ಸೀಮಿತ ಅವಕಾಶಗಳ ನಡುವೆ ಸಾಧನೆಯ ಧ್ಯೇಯದೊಂದಿಗೆ ಉದ್ಯಮ ಆರಂಭಿಸಿ ಬೆಳೆಸಿದರೆ, ಈಗಿನ ಪೀಳಿಗೆ ವ್ಯಾಪಾರವನ್ನು ಲಾಭಕ್ಕೋಸ್ಕರ ಎಂದು ತಿಳಿದಿದೆ. ಲಾಭದ ಉದ್ದೇಶಕ್ಕೆ ಜನಸೇವೆ ಅದು ಒಪ್ಪುವುದಿಲ್ಲ. ಈಗ ಅವಕಾಶಗಳು ಹೆಚ್ಚು. ಹಳೆಯದನ್ನು ನಿರ್ವಹಣೆ ಮಾಡುತ್ತಲೇ ಹೊಸದನ್ನು ಆಕರ್ಷಿಸಬೇಕು. ಎರಡರ ನಡುವೆ ಸಮನ್ವಯದಲ್ಲಿ ಕುಟುಂಬ ಒಡೆತನದ ಸಂಸ್ಥೆಗಳನ್ನು ಕೊಂಡೊಯ್ಯಬೇಕು ಎಂದು ಸಲಹೆ ನೀಡಿದ ಅವರು, ಈಗಿನ ಪೀಳಿಗೆಗೆ ಜಾಗತಿಕ ಮಾರುಕಟ್ಟೆಯ ಮಾಹಿತಿ ಇದೆ. ಹೊಸತನ, ಬದಲಾವಣೆಗಳಿಗೆ ಹೊಂದಿಕೊಳ್ಳುವ ಗುಣ ಹಾಗೂ ಕಾರ್ಯದಕ್ಷತೆಯುಳ್ಳ ಹೊಸತನ, ಬದಲಾವಣೆಗಳಿಗೆ ಹೊಂದಿಕೊಳ್ಳುವ ಗುಣ ಹಾಗೂ ಕಾರ್ಯದಕ್ಷತೆಯುಳ್ಳ ಉದ್ಯೋಗಿಗಳ ನೆರವು ಪಡೆದರೆ ಬೆಳವಣಿಗೆಗೆ ಮುಕ್ತ ಅವಕಾಶವಿದೆ’ ಎಂದರು.

ಚರ್ಚೆಯ ನೇತೃತ್ವ ಶಾಂತಲಾ ಸಮೂಹದ ಎಸ್.ರುದ್ರೇಗೌಡ್ರು, ಡಿ.ಜಿ.ಬಸವರಾಜ್, ಡಿ.ಎಸ್.ಚಂದ್ರಶೇಖರ್, ಎಚ್.ಮಹೇಂದ್ರಪ್ಪ ವಹಿಸಿದ್ದರು.

ಶಾಂತಲಾ ಸಮೂಹ ಸಂಸ್ಥೆ ಐದು ದೊಡ್ಡ ಫೌಂಡ್ರಿಗಳು ಸೇರಿದಂತೆ 10 ಕಂಪನಿಗಳ ಹೊಂದಿದ್ದು, ಒಟ್ಟು 40 ಕುಟುಂಬಗಳ ಒಳಗೊಂಡಿದೆ. ಇದರಲ್ಲಿ ಕೆಲವರು ಹೂಡಿಕೆ ಮಾಡಿದ್ದು, ಇನ್ನೂ ಕೆಲವರು ನಿರ್ವಹಣೆಯಲ್ಲಿ ಕೈಜೋಡಿಸಿದ್ದಾರೆ ಎಂದು ವಿಧಾನಪರಿಷತ್ ಮಾಜಿ ಸದಸ್ಯ ಎಸ್.ರುದ್ರೇಗೌಡ ಹೇಳಿದರು. 40 ವರ್ಷಗಳ ಹಳೆಯ ಈ ಸಂಸ್ಥೆ ಕಳೆದ ವರ್ಷ 450 ಕೋಟಿ ವಹಿವಾಟು ನಡೆಸಿದೆ. 1 ಸಾವಿರ ಕೋಟಿ ವಹಿವಾಟು ನಡೆಸುವ ಗುರಿಯೊಂದಿಗೆ ಎರಡನೇ ತಲೆಮಾರಿನ ನಿರ್ವಹಣೆಯೊಂದಿಗೆ ಮುನ್ನಡೆಯುವ ಉದ್ದೇಶ ಹೊಂದಿದೆ ಎಂದರು.

# ಅವೈಜ್ಞಾನಿಕ ಟೋಲ್ ಕೇಂದ್ರ: ಆರೋಪ



ಕುಣಿಗಲ್ ತಾಲ್ಲೂಕು ರಾಜ್ಯ ಹೆದ್ದಾರಿ 33ರ ರಾಜೇಂದ್ರಪುರ ಗೇಟ್ ಬಳಿಯ ಟೋಲ್ ಸಂಗ್ರಹ ಕೇಂದ್ರವನ್ನು ಖಂಡಿಸಿ ರೈತ ಸಂಘದ ಪದಾಧಿಕಾರಿಗಳು ರಸ್ತೆ ತಡೆದು ಪ್ರತಿಭಟನೆ ನಡೆಸಿದರು.

**ಕುಣಿಗಲ್:** ರಾಜ್ಯ ಹೆದ್ದಾರಿ 33ರ ರಾಜೇಂದ್ರಪುರ ಗೇಟ್ ಬಳಿಯ ಟೋಲ್ ಸಂಗ್ರಹ ಕೇಂದ್ರ ಅವೈಜ್ಞಾನಿಕವಾಗಿದ್ದು, ಟೋಲ್ ಸಂಗ್ರಹಿಸದಂತೆ ಆಗ್ರಹಿಸಿದ ರೈತ ಸಂಘದ ಪದಾಧಿಕಾರಿಗಳು ಕೇಂದ್ರವನ್ನು ಸ್ಥಗಿತಗೊಳಿಸುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಿದರು.

ರೈತಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಕರಿಗೌಡ ಬೀಚನಹಳ್ಳಿ ಮಾತನಾಡಿ, ಹೆದ್ದಾರಿಯಲ್ಲಿ ನಿರ್ಮಿಸಿರುವ ಟೋಲ್ ಸಂಗ್ರಹ ಕೇಂದ್ರ ಅವೈಜ್ಞಾನಿಕವಾಗಿದೆ. ಸೇವಾ ರಸ್ತೆ, ತುರ್ತು ನಿರ್ಗಮನದ ರಸ್ತೆ, ಸಂಚಾರಿಗಳಿಗೆ ಮೂಲ ಸೌಕರ್ಯದ ವ್ಯವಸ್ಥೆ ಮಾಡಿಲ್ಲ. ಟೋಲ್ ಕೇಂದ್ರದ ಸಮೀಪ ಯಾವುದೇ ಸೂಚನಾ ಫಲಕ ಅಳವಡಿಸಿಲ್ಲ. ಈ ಹಿಂದೆಯೂ ಸರ್ಕಾರದ ನಿಯಮಗಳಿಗನುಸಾರ ಟೋಲ್ ಸಂಗ್ರಹ ಕೇಂದ್ರ ಸ್ಥಾಪಿಸದ ಕಾರಣ ಚಾಲಕನ ನಿಯಂತ್ರಣ ತಪ್ಪಿದ ಲಾರಿ ಡಿಕ್ಕಿ ಹೊಡೆದು ಕೇಂದ್ರವೇ ಛಿದ್ರವಾಗಿತ್ತು. ಸಿಬ್ಬಂದಿ ಪ್ರಾಣಾಪಾಯದಿಂದ ಪಾರಾಗಿದ್ದರು ಎಂದರು. ಪರ್ಯಾಯವಾಗಿ ಸ್ಥಾಪಿಸಿರುವ ಕೇಂದ್ರ ಸಹ ರಸ್ತೆ ಮಧ್ಯೆ ಕಿರಿದಾಗಿದೆ. ಸಿಬ್ಬಂದಿಗಳಿಗೆ ಕಾರ್ಯನಿರ್ವಹಿಸಲು ಸಮಸ್ಯೆ, ಮೂಲ ಸೌಕರ್ಯಗಳಿಲ್ಲದ ಕಾರಣ ಸಂಚಾರ ಮಾಡುವ ವಾಹನ, ನಾಗರಿಕರು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಸ್ಥಳೀಯರಿಗೆ ಸೇವಾ ರಸ್ತೆ ಮಾಡದ ಕಾರಣ ಇದೇ ರಸ್ತೆಯಲ್ಲಿ ಹಣ ನೀಡಿ ಸಂಚಾರ ಮಾಡಬೇಕಿದೆ. ನಿಯಮಾನುಸಾರ ನಿರ್ಮಿಸದೆ ನಾಗರಿಕರು, ಪ್ರಯಾಣಿಕರಿಗೆ ಸಮಸ್ಯೆ ಉಂಟು ಮಾಡುತ್ತಿರುವ ಕೇಂದ್ರ ರದ್ದುಮಾಡುವಂತೆ ಆಗ್ರಹಿಸಿದರು.

ರಾಜ್ಯ ರಸ್ತೆ ಅಭಿವೃದ್ಧಿ ನಿಗಮದ ಎಇಇ ಹರಿಣಿ ಕುಮಾರಿ, ಪ್ರತಿಭಟನಕಾರರ ಮನವಿ ಆಲಿಸಿ ತಿಂಗಳಲ್ಲಿ ಅವ್ಯವಸ್ಥೆ ಸರಿಪಡಿಸುವ ಭರವಸೆ ನೀಡಿದಾಗ ಜಗ್ಗದ ಪ್ರತಿಭಟನಕಾರರು ಅಲ್ಲಿಯವರೆಗೂ ಟೋಲ್ ಸಂಗ್ರಹ ಮಾಡದಿರುವಂತೆ ಪಟ್ಟು ಹಿಡಿದರು. ಮೂಲಸೌಕರ್ಯ ನೀಡುವವರೆಗೂ ಹಣ ಸಂಗ್ರಹ ಮಾಡದಿರುವಂತೆ ಗುತ್ತಿಗೆದಾರನಿಗೆ ಸೂಚಿಸಿದರು.

ಎಚ್ಚೆತ್ತ ಪ್ರತಿಭಟನಕಾರರು ಫಾಸ್ಟ್‌ಟ್ಯಾಗ್ ಮೂಲಕ ಹಣ ಕಟಾವು ಮಾಡಲಾಗುತ್ತಿದ್ದು, ಪಾಸ್ಟ್‌ಟ್ಯಾಗ್ ವ್ಯವಸ್ಥೆ ಸ್ಥಗಿತಗೊಳಿಸುವಂತೆ ಆಗ್ರಹಿಸಿದರೂ, ಪ್ರಯೋಜನವಾಗದ ಕಾರಣ ಫಾಸ್ಟ್‌ಟ್ಯಾಗ್ ವ್ಯವಸ್ಥೆ ಸಂಪರ್ಕವನ್ನು ರೈತ ಸಂಘದ ಪದಾಧಿಕಾರಿಗಳು ಕಡಿತಗೊಳಿಸಿದರು.

ಆಮ್ ಆದ್ಮಿ ಪಕ್ಷದ ಎಚ್.ಎ. ಜಯರಾಮಯ್ಯ, ಶಿವಲಿಂಗಯ್ಯ, ಕನ್ನಡಾಂಬೆ ರಕ್ಷಣ ವೇದಿಕೆ ಅಧ್ಯಕ್ಷ ರಾಜಶೇಖರ್, ಪದಾಧಿಕಾರಿಗಳು, ಸಿಪಿಐ ಮಾದ್ಯಾ ನಾಯಕ್, ಪಿಎಸ್ಐ ಪ್ರಶಾಂತ್, ಪಿಡಿಒ ಮಧುಸೂಧನ್ ಹಾಜರಿದ್ದರು.

**ಕಲಿಕಾ ಕಾರ್ಯಾಗಾರಕ್ಕೆ ಚಾಲನೆ: ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ ಅಭಿಮತ**

# ‘ರಂಗಗೀತೆಗಳ ಉಳಿವು ಅಗತ್ಯ’



ಮೈಸೂರಿನ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದಲ್ಲಿ ದಾವಣಗೆರೆಯ ವೃತ್ತಿ ರಂಗಭೂಮಿ ರಂಗಾಯಣ ಆಯೋಜಿಸಿರುವ ರಂಗ ಸಂಗೀತ ಕಲಿಕಾ ಕಾರ್ಯಾಗಾರಕ್ಕೆ ಕುಲಪತಿ ಪ್ರೊ.ನಾಗೇಶ ವಿ.ಬೆಟ್ಟಕೋಟೆ ಚಾಲನೆ ನೀಡಿದರು. ಮಲ್ಲಿಕಾರ್ಜುನ ಕಡಕೋಳ, ಎಚ್.ಎಸ್.ಸುರೇಶ್ ಬಾಬು, ವೈ.ಎಂ.ಪುಟ್ಟಣ್ಣಯ್ಯ, ಪ್ರೊ.ಎಂ.ಜಿ.ಮಂಜುನಾಥ್ ಪಾಲ್ಗೊಂಡಿದ್ದರು

**ಮೈಸೂರು:** ‘ಭಾರತೀಯ ರಂಗಭೂಮಿಗೆ ರಾಜ್ಯದ ಕೊಡುಗೆ ಅಪಾರವಾಗಿದೆ. ರಾಜ್ಯದ ವೃತ್ತಿ ರಂಗಭೂಮಿಯ ರಂಗಗೀತೆ ಉಳಿಸುವು ದೆಂದರೆ ಅದು ಪರಂಪರೆ ರಕ್ಷಣೆಯೇ ಆಗಿದೆ’ ಎಂದು ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ ಅಭಿಪ್ರಾಯಪಟ್ಟರು.

ಇಲ್ಲಿನ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದಲ್ಲಿ ‘ದಾವಣಗೆರೆಯ ವೃತ್ತಿ ರಂಗಭೂಮಿ ರಂಗಾಯಣ’ ಆಯೋಜಿಸಿರುವ 15 ದಿನಗಳ ರಂಗ ಸಂಗೀತ ಮತ್ತು ರಂಗಗೀತೆಗಳ ಕಲಿಕಾ ಕಾರ್ಯಾಗಾರಕ್ಕೆ –ಚಾಲನೆ ನೀಡಿ ಮಾತನಾಡಿದರು.

‘ರಾಜ್ಯದ ವೃತ್ತಿ ರಂಗಭೂಮಿಗೆ ಶತಮಾನಗಳ ಇತಿಹಾಸದ ಶ್ರೀಮಂತ ಪರಂಪರೆಯಿದೆ. ನೂರಾರು ಕಂಪನಿಗಳು ಸಾವಿರಾರು ಕಲಾವಿದರಿಗೆ ಆಶ್ರಯ ನೀಡಿದ್ದಲ್ಲದೇ, ಭಾಷೆ ಹಾಗೂ ಸಂಸ್ಕೃತಿಯ ಕೊಂಡಿಯಂತೆ ಕೆಲಸ ಮಾಡಿವೆ. ಗುಬ್ಬಿ ಕಂಪನಿಯಿದ್ದ ಕಾಲದಲ್ಲಿ ರಾಜ್ಯದ ವೃತ್ತಿ ರಂಗಭೂಮಿಯು ಉತ್ತುಂಗಕ್ಕೆ ಏರಿತ್ತು’ ಎಂದು ಸ್ಮರಿಸಿದರು.

‘ಗುಬ್ಬಿ ನಾಟಕಗಳಲ್ಲಿ ವೇದಿಕೆ ಮೇಲೆ ಕುದುರೆ, ಆನೆಗಳನ್ನು ಕರೆತರಲಾಗುತ್ತಿತ್ತು. ಆಗೆಲ್ಲ, ನಾಟಕದಲ್ಲಿ ಅಭಿನಯಿಸಬೇಕಿದ್ದರೆ ಕಡ್ಡಾಯವಾಗಿ ಸಂಗೀತ ಕಲಿಯಬೇಕಿತ್ತು. ಕಂಠಸಿರಿ ಹೊಂದಿದ್ದ ಕಲಾವಿದರಿಗೆ ವಿಶೇಷ ಮನ್ನಣೆಯಿತ್ತು. ಆಧುನಿಕತೆ ಪ್ರವೇಶಿಸಿದಂತೆ ಕಂಪನಿ ನಾಟಕಗಳು ಕಳೆಗುಂದಿದವು’ ಎಂದರು.

ವೃತ್ತಿ ರಂಗಭೂಮಿ ರಂಗಾಯಣ ನಿರ್ದೇಶಕ ಮಲ್ಲಿಕಾರ್ಜುನ ಕಡಕೋಳ ಮಾತನಾಡಿ, ‘ರಂಗಭೂಮಿಯ ಅಭಿನಯ, ರಂಗ ಸಂಗೀತ, ರಂಗ ಸಜ್ಜಿಕೆ ಪರಂಪರೆಗೆ 150 ವರ್ಷಕ್ಕೂ ಹೆಚ್ಚು ಇತಿಹಾಸವಿದೆ.

ಕಿರುತೆರೆ, ಹೊಸ ಕಾಲದ ಮಾಧ್ಯಮಗಳ ಪ್ರಭಾವದಿಂದ ಕಂಪನಿ ನಾಟಕಗಳು ಮೂಲ ಆಶಯಗಳನ್ನು ಬದಿಗೆ ಸರಿಸಿವೆ’ ಎಂದು ಬೇಸರ ವ್ಯಕ್ತಪಡಿಸಿದರು.

‘ರಂಗ ಸಂಗೀತದಲ್ಲಿ ಕಂದ, ವೃತ್ತ, ಸೀಸ ಪದ್ಯಗಳು ರಚನೆ ಆಗುತ್ತಿದ್ದವು. ಇದೀಗ ನಾಟಕಗಳಲ್ಲಿ ಈ ಮಾದರಿಯ ಗೀತೆಗಳು ಬರುತ್ತಿಲ್ಲ. ರಾಜ್ಯದಲ್ಲಿ ವರ್ಷಕ್ಕೆ 18 ಸಾವಿರ ನಾಟಕಗಳು ವೇದಿಕೆಯೇರುತ್ತವೆ. ಪ್ರತಿ ನಾಟಕಕ್ಕೂ ಜನರೇ ಕನಿಷ್ಠ 5 ಲಕ್ಷ ಖರ್ಚು ಮಾಡುತ್ತಿದ್ದು, ವಾರ್ಷಿಕ 100 ಕೋಟಿಯಷ್ಟು ಖರ್ಚು ಮಾಡುತ್ತಿದ್ದಾರೆ’ ಎಂದು ಹೇಳಿದರು.

ರಂಗಕರ್ಮಿ ವೈ.ಎಂ.ಪುಟ್ಟಣ್ಣಯ್ಯ, ಪರೀಕ್ಷಾಂಗ ಕುಲಸಚಿವ ಪ್ರೊ.ಎಂ.ಜಿ.ಮಂಜುನಾಥ್, ರಂಗ ಸಮಾಜದ ಸದಸ್ಯ ಎಚ್.ಎಸ್.ಸುರೇಶ್‌ಬಾಬು, ರಂಗಾಯಣದ ವಿಶೇಷಾಧಿಕಾರಿ ರವಿಚಂದ್ರ, ಶಿಬಿರದ ಸಂಚಾಲಕ ಸುಪ್ರೀತ್ ಎಸ್. ಭಾರದ್ವಾಜ್, ಭ್ರಮರ ಉಡುಪ ಪಾಲ್ಗೊಂಡಿದ್ದರು.

# ನಂದಿ: ಬಯಲುಸೀಮೆ ಅಭಿವೃದ್ಧಿಗೆ ನಾಂದಿ

**ಅಂತಿಮ ಹಂತದ ಸಿದ್ಧತೆ ಪರಿಶೀಲಿಸಿದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ್**



ಚಿಕ್ಕಬಳ್ಳಾಪುರ ತಾಲ್ಲೂಕಿನ ನಂದಿಗಿರಿಧಾಮದ ಸಚಿವ ಸಂಪುಟ ಸಭೆ ನಡೆಯುವ ಹಿನ್ನೆಲೆಯಲ್ಲಿಗಿರಿಧಾಮದಲ್ಲಿ ಸಿದ್ದತೆಗಳನ್ನು ಸಚಿವ ಡಾ.ಎಂ.ಸಿ.ಸುಧಾಕರ್ ಪರಿಶೀಲಿಸಿದರು

**ಚಿಕ್ಕಬಳ್ಳಾಪುರ:** ನಂದಿಗಿರಿಧಾಮದಲ್ಲಿ ನಡೆಯುವ ಸಚಿವ ಸಂಪುಟ ಸಭೆಯಲ್ಲಿ ಚಿಕ್ಕಬಳ್ಳಾಪುರ, ಕೋಲಾರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ಅಭಿವೃದ್ಧಿಯ ಕುರಿತು ವಿಶೇಷ ಬೆಳಕು ಚೆಲ್ಲುವ ನಿರೀಕ್ಷೆ ಇದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ್ ತಿಳಿಸಿದರು.

ನಂದಿಗಿರಿಧಾಮದ ಮಯೂರ ಸಭಾಂಗಣದಲ್ಲಿ ಸಚಿವ ಸಂಪುಟ ಸಭೆ ನಡೆಯುವ ಹಿನ್ನೆಲೆಯಲ್ಲಿ ಗಿರಿಧಾಮಕ್ಕೆ ಭೇಟಿ ನೀಡಿ ಸಿದ್ಧತೆ ಪರಿಶೀಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

ಕಲಬುರಗಿ, ಚಾಮರಾಜನಗರ ಜಿಲ್ಲೆಗಳಲ್ಲಿ ಸಚಿವ ಸಂಪುಟ ಸಭೆ ನಡೆದ ನಂತರ ಚಿಕ್ಕಬಳ್ಳಾಪುರ ಜಿಲ್ಲೆಯ ಐತಿಹಾಸಿಕ ನಂದಿಗಿರಿಧಾಮ ದಲ್ಲಿಯೂ ಸಭೆ ನಡೆಸಬೇಕು ಎಂದು ಮುಖ್ಯಮಂತ್ರಿ ಅವರಿಗೆ ಕೋಲಾರ, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ಉಸ್ತುವಾರಿ ಸಚಿವರು ಮನವಿ ಮಾಡಿದ್ದೆವು ಎಂದರು.

ಮನವಿಗೆ ಸ್ಪಂದಿಸಿದ್ದ ಮುಖ್ಯಮಂತ್ರಿ ಜೂನ್ 19 ರಂದು ದಿನಾಂಕ ನೀಡಿದ್ದರು. ಸಭೆಯೂ ನಿಗದಿಯಾಗಿತ್ತು. ಆದರೆ ಈ ಭಾಗದ ಜಿಲ್ಲೆಗಳ ಜನರ ನಿರೀಕ್ಷೆಗೆ ಪೂರಕವಾಗಿ ಯೋಜನೆಗಳು ಸಿದ್ಧತೆ ಆಗಿಲ್ಲದ ಹಾಗೂ ಹಣಕಾಸು ಇಲಾಖೆಯ ಕಾರ್ಯ ಒತ್ತಡದಿಂದ ಪೂರಕ ತಯಾರಿಗಳು ಆಗದ ಕಾರಣ ಆ ಸಭೆ ವಿಧಾನಸೌಧಕ್ಕೆ ಸ್ಥಳಾಂತರವಾಯಿತು ಎಂದರು.

ಸಚಿವ ಸಂಪುಟ ಸಭೆಗೆ ಜಿಲ್ಲಾಡಳಿತ ಸಕಲ ಸಿದ್ಧತೆಗಳನ್ನು ಮಾಡಿಕೊಂಡಿದೆ. ಮೂರೂ ಜಿಲ್ಲೆಗಳ ಹಲವು ನಿರೀಕ್ಷೆಗಳು ಗರಿಗೆದರಿವೆ. ಸಚಿವ ಸಂಪುಟ ಸಭೆಯಲ್ಲಿ ತೆಗೆದುಕೊಳ್ಳುವ ಮಹತ್ವದ ತೀರ್ಮಾನಗಳು ಈ ಭಾಗದ ಜನರಲ್ಲಿ ಹಲವು ಭರವಸೆಗಳನ್ನು ಹುಟ್ಟುಹಾಕಿವೆ. ಮುಖ್ಯಮಂತ್ರಿ ಅವರು ಪ್ರಕಟಿಸುವ ನಿರ್ಧಾರಗಳು ಮೂರು ಜಿಲ್ಲೆಗಳ ಅಭಿವೃದ್ಧಿ ದೃಷ್ಟಿಯಿಂದ ಮಹತ್ವದ್ದಾಗಿದ್ದು, ವಿಶೇಷವಾಗಿ ಬೆಳಕು ಚೆಲ್ಲಲಿದೆ ಎಂದು ಹೇಳಿದರು. ಸಚಿವ ಸಂಪುಟ ಸಭೆ ಹಿನ್ನೆಲೆಯಲ್ಲಿ ನಂದಿ ಗ್ರಾಮದ ಭೋಗ ನಂದೀಶ್ವರ ದೇವಾಲಯ ಮತ್ತು ನಂದಿಗಿರಿಧಾಮಕ್ಕೆ ಖಾಸಗಿ ವ್ಯಕ್ತಿಗಳು ಹಾಗೂ ವಾಹನಗಳ ಪ್ರವೇಶ ನಿರ್ಬಂಧಿಸಲಾಗಿದೆ. ಅಧಿಕೃತ ಅನುಮತಿ ಪತ್ರ ಹೊಂದಿರುವ ವ್ಯಕ್ತಿಗಳು ಮತ್ತು ವಾಹನಗಳಿಗೆ ಮಾತ್ರ ಪ್ರವೇಶ ಇರುತ್ತದೆ ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಪಿ.ಎನ್.ರವೀಂದ್ರ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ ಡಾ.ವೈ.ನವೀನ್ ಭಟ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಶಾಲ್ ಚೌಕ್ಸೆ, ಜಿಲ್ಲಾ ಅರಣ್ಯ ಉಪ ಸಂರಕ್ಷಣಾಧಿಕಾರಿ ಗಿರೀಶ್, ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ಎನ್.ಭಾಸ್ಕರ್ ಹಾಗೂ ವಿವಿಧ ಇಲಾಖೆಗಳ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಈ ವೇಳೆ ಹಾಜರಿದ್ದರು.

**ಗಿರಿಧಾಮಕ್ಕೆ ಬಸ್‌ನಲ್ಲಿ ಸಿ.ಎಂ, ಸಚಿವರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬೆಂಗಳೂರಿನ ನಿವಾಸದಿಂದ ರಸ್ತೆ ಮಾರ್ಗದ ಮೂಲಕ ನಂದಿ ಗ್ರಾಮಕ್ಕೆ ಬರುವರು. ನಂದಿ ಗ್ರಾಮದ ಭೋಗ ನಂದೀಶ್ವರ ದೇವಾಲಯದಲ್ಲಿ ಸಚಿವ ಸಂಪುಟದ ಸಹೋದ್ಯೋಗಿಗಳೊಂದಿಗೆ ಭೇಟಿ ನೀಡಿ, ಅಲ್ಲಿ ಪೂಜೆ ಸಲ್ಲಿಸುವರು. ನಂತರ ಕೆಎಸ್‌ಆರ್‌ಟಿಸಿ ಬಸ್ ಮೂಲಕ ನಂದಿಗಿರಿಧಾಮಕ್ಕೆ ತೆರಳುವರು. ಮಧ್ಯಾಹ್ನ 12ಕ್ಕೆ ಸಚಿವ ಸಂಪುಟ ಸಭೆ ಆರಂಭವಾಗಲಿದೆ ಎಂದು ಸಚಿವರು ತಿಳಿಸಿದರು.

**‘ಸಸ್ಯ ಪೋಷಕಾಂಶ’ ಕುರಿತ ವಿಚಾರ ಸಂಕಿರಣ: ಪ್ರೊ.ಎಚ್.ಎಸ್.ಸಾವಿತ್ರಿ ಕಳವಳ**

# ‘ವೈರಲ್ ಸೋಂಕು: ಇಳುವರಿ ಕುಸಿತ’




**ಮೈಸೂರು:** ‘ವೈರಲ್ ಸೋಂಕಿನಿಂದ ದೇಶದ ಶೇ 10ರಿಂದ 30ರಷ್ಟು ಕೃಷಿ ಬೆಳೆಗಳ ಇಳುವರಿ ಕುಸಿತ ಕಾಣುತ್ತಿದೆ’ ಎಂದು ಭಾರತೀಯ ವಿಜ್ಞಾನ ಸಂಸ್ಥೆಯ ನಿವೃತ್ತ ವಿಜ್ಞಾನಿ ಪ್ರೊ.ಎಚ್.ಎಸ್.ಸಾವಿತ್ರಿ ಹೇಳಿದರು.

ನಗರದ ಕೇಂದ್ರೀಯ ಆಹಾರ ತಂತ್ರಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಆಯೋಜಿಸಿದ್ದ ‘ಸಸ್ಯ ಪೋಷಕಾಂಶ: ಮಾನವ ಪೌಷ್ಟಿಕತೆ ಮತ್ತು ತಾಂತ್ರಿಕ ನಾವಿನ್ಯತೆ’ ಕುರಿತ ಅಮೃತ ಮಹೋತ್ಸವ ವಿಚಾರ ಸಂಕಿರಣದಲ್ಲಿ ಮಾತನಾಡಿ, ‘ಸಸ್ಯ ಪೋಷಕಾಂಶಗಳ ಮೇಲೆ ವೈರಲ್ ಸೋಂಕು ಪರಿಣಾಮ ಬೀರುತ್ತಿದೆ’ ಎಂದರು.

‘ಜಾಗತಿಕ ಬೆಳೆ ನಷ್ಟದಲ್ಲಿ ಅರ್ಧದಷ್ಟು ಪ್ರಮಾಣ ದೇಶದ ಕೃಷಿಯಲ್ಲಿ ಆಗುತ್ತಿದೆ. ಬಾಳೆ, ಭತ್ತ, ಟೊಮೆಟೊ, ಹತ್ತಿ, ನೆಲಗಡಲೆ ಹೆಚ್ಚು ಸೋಂಕಿಗೆ ತುತ್ತಾ ಗುತ್ತಿವೆ’ ಎಂದು ಮಾಹಿತಿ ನೀಡಿದರು. ವೈರಲ್ ಪ್ರೋಟಿನ್‌ಗಳು ಬಹುಕಾರ್ಯವಿಧಾನ ಒಳಗೊಂಡಿದ್ದು, ಅವುಗಳ ವಿನ್ಯಾಸ, ಕಾರ್ಯವೈಖರಿಯನ್ನು ಸದಾ ಬದಲಿಸುತ್ತಿರುತ್ತವೆ. ಅವುಗಳನ್ನು ಹತೋಟಿಗೆ ತರಬೇಕೆಂದರೆ ಸಂಶೋಧನೆಯನ್ನು ಮುಂದುವರಿಸಬೇಕು’ ಎಂದರು.

ಸಿಎಫ್‌ಟಿಆರ್‌ಐ ನಿವೃತ್ತ ನಿರ್ದೇಶಕ ಪ್ರೊ.ವಿ.ಪ್ರಕಾಶ್ ಮಾತನಾಡಿ, ‘ಜಗತ್ತಿನಲ್ಲಿ ಶಿಶು ಆಹಾರ ಮತ್ತು ಸಿದ್ಧಪಡಿಸಿದ ಆಹಾರ ಎರಡನ್ನೂ ಆವಿಷ್ಕರಿಸಿದ ಸಂಸ್ಥೆ ಎಂಬ ಹೆಗ್ಗಳಿಕೆ ಸಿಎಫ್‌ಟಿಆರ್‌ಐಗೆ ಇದೆ. ದೇಶವಷ್ಟೇ ಅಲ್ಲ ಜಗತ್ತಿನ ಆಹಾರ ತಂತ್ರಜ್ಞಾನ, ಸ್ವಾವಲಂಬನೆಯಲ್ಲೂ ಸಂಸ್ಥೆಯ ಕೊಡುಗೆ ಹಿರಿದಾಗಿದೆ’ ಎಂದು ತಿಳಿಸಿದರು. ನ್ಯೂಜಿಲೆಂಡ್‌ನಿಂದ ಶಿಶು ಆಹಾರವನ್ನು ಆಮದು ಮಾಡಿಕೊಳ್ಳಲಾಗಿತ್ತು. ಅದು ಬರುವುದು ತಪ್ಪಿದಾಗ, ಪೌಷ್ಟಿಕ ಅಟ್ಟ, ಮೈಸೂರ್ ಫ್ಲೋರ್, ರೈಸ್ ಬ್ರಾನ್ ಸೇರಿದಂತೆ ನೂರಾರು ಆವಿಷ್ಕಾರಗಳು ಸಂಸ್ಥೆಯಿಂದ ಹೊಮ್ಮಿದವು. ಆಹಾರೋದ್ಯಮದಲ್ಲಿ ಕ್ರಾಂತಿ ಆಗಲು ಕಾರಣವಾಯಿತು’ ಎಂದು ಹೇಳಿದರು.

# ಸೇತುವೆ ನಿರ್ಮಾಣಕ್ಕೆ ಹಲವರ ಪರಿಶ್ರಮ



**ಸಾಗರ:** ‘ಅಂಬಾರಗೋಡ್ಲು–ಕಳಸವಳ್ಳಿ ಸೇತುವೆ ಹಿನ್ನೀರ ಭಾಗದ ಜನರ ಕನಸಾಗಿತ್ತು. ಅದು ನನಸಾದ ಕ್ಷಣ ಅತ್ಯಂತ ಸಂತೋಷ ತಂದಿದೆ’ ಎಂದು ಸೇತುವೆ ಹೋರಾಟಗಾರ ಪ್ರಸನ್ನ ಕೆರೆಕೈ ತಿಳಿಸಿದರು.

ತಾಲ್ಲೂಕಿನ ಅಂಬಾರಗೋಡ್ಲು–ಕಳಸವಳ್ಳಿ ಸಿಗಂದೂರು ಚೌಡೇಶ್ವರಿ ಸೇತುವೆ ಮೇಲ್ಭಾಗದಲ್ಲಿ ಸಾಗರದ ಸಹೃದಯ ಬಳಗದ ವತಿಯಿಂದ ನೀಡಲಾದ ಅಭಿನಂದನೆ ಸ್ವೀಕರಿಸಿ ಮಾತನಾಡಿದರು.

‘ಸಿಗಂದೂರು ಸೇತುವೆ ನಿರ್ಮಾಣಕ್ಕೆ ಹಲವರ ಕೊಡುಗೆ ಇದೆ. ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಸೇತುವೆ ನಿರ್ಮಾಣ ಸಾಧ್ಯ ಎನ್ನುವ ನಮ್ಮ ಕನಸಿಗೆ ಸ್ಫೂರ್ತಿ ತುಂಬಿದರು. ಬಿ.ವೈ.ರಾಘವೇಂದ್ರ ಅವರ ನಿರಂತರ ಶ್ರಮ ಯೋಜನೆಯ ಹಿಂದೆ ಇದೆ. ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರ ಸಹಕಾರ ಮರೆಯಲು ಸಾಧ್ಯವಿಲ್ಲ. ಸೇತುವೆ ನಿರ್ಮಾಣವಾಗಲು ಅನೇಕ ಹೋರಾಟಗಾರರು, ಜನಪ್ರತಿನಿಧಿಗಳು ಕೈಜೋಡಿಸಿದ್ದಾರೆ. ಕಾಲಕಾಲಕ್ಕೆ ಅನೇಕರು ಸಹಕಾರ ನೀಡಿದ್ದಾರೆ. ಈ ಹೋರಾಟದಲ್ಲಿ ಭಾಗಿಯಾದ ಎಲ್ಲರ ಪರವಾಗಿ ನಾನು ಗೌರವ ಸ್ವೀಕರಿಸಿದ್ದೇನೆ’ ಎಂದರು.

ತುಮರಿ ಗ್ರಾಮ ಪಂಚಾಯಿತಿ ಸದಸ್ಯ ಶ್ರೀನಿವಾಸ್ ಗದ್ದೆಮನೆ ಮಾತನಾಡಿ, ‘ನಮ್ಮ ಜೀವಿತಾವಧಿಯಲ್ಲಿ ಇಂತಹ ಸೇತುವೆ ನೋಡುತ್ತೇವೆ ಎಂದು ಭಾವಿಸಿರಲಿಲ್ಲ. ಸೇತುವೆ ಅಗುತ್ತದೆಯೋ, ಇಲ್ಲವೋ ಎಂದು ಮಾತನಾಡಿಕೊಳ್ಳುತ್ತಿದ್ದ ನಾವೀಗ ಸೇತುವೆ ಮೇಲೆ ನಿಂತು ಮಾತನಾಡುತ್ತಿದ್ದೇವೆ ಎನ್ನುವುದು ಹೆಮ್ಮೆ ತಂದಿದೆ’ ಎಂದರು.

ಸಹೃದಯ ಬಳಗದ ಅಧ್ಯಕ್ಷ ಜಿ.ನಾಗೇಶ್ ಅಧ್ಯಕ್ಷತೆ ವಹಿಸಿದ್ದರು.

**Printed by :** S.T. NAVEEN KUMAR,No - 49B, LIG, 4th Cross, Near Sadiq Nagara Water Tank, K.H.B Colony, Chitradurga -577501, Chitradurga Dist. Karnataka. **Published by :** Y.K. PRAVEEN KUMAR,Sree Raghavendra Nilaya, Near Old Sharada School, Ward No-4, Vedavathi Nagara, Hiriyur – 577598, Chitradurga Dist, Karnataka. **Owned by :** Y.K. PRAVEEN KUMAR,Sree Raghavendra Nilaya, Near Old Sharada School, Ward No-4, Vedavathi Nagara, Hiriyur – 577598,Chitradurga Dist, Karnataka. **Printed at : NITHYA PRINTERS**,No - 49B, LIG, 4th Cross, Near Sadiq Nagara Water Tank, K.H.B Colony, Chitradurga -577501,Chitradurga Dist. Karnataka. **Published at :** At Sree Raghavendra Nilaya,Near Old Sharada School, Ward No-4, Vedavathi Nagara, Hiriyur – 577598,Chitradurga Dist, Karnataka. **Editor :** Y.K. PRAVEEN KUMAR,Sree Raghavendra Nilaya, Near Old Sharada School, Ward No-4, Vedavathi Nagara, Hiriyur – 577598,Chitradurga Dist, Karnataka.